Swabhimani Sahakari

ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Pages : 20 / 12₹

Volume - 16
Issue - 5
May - 2019

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ



ಮೇ ತಿಂಗಳ ಮೇಳ: ಎಲ್ಲೆಡೆ ಮಾವು-ಹಲಸು

ಸೌಹಾರ್ದ ಸಹಕಾರಿಗಳ
ಸಂಖ್ಯೆ : 4643

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1240

ಮೇ 1: ವಿಶ್ವ ಕಾರ್ಮಿಕ ದಿನ, ಮೇ 7: ಬಸವ ಜಯಂತಿ, ಮೇ 9: ಶಂಕರ ಜಯಂತಿ, ಮೇ 18: ಬುದ್ಧ ಪೂರ್ಣಿಮಾ ಶುಭಾಶಯಗಳು

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ಈ ಅಧ್ಯಾದೇಶದ ಬಗ್ಗೆ ಸಾರ್ವಜನಿಕರಲ್ಲಿ ಹಾಗೂ ಸಹಕಾರಿಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯ ಎಲ್ಲ ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಸಹಕಾರಿ ಸಂಸ್ಥೆಗಳಿಂದ ತ್ವರಿತ ಗತಿಯಲ್ಲಿ ನಡೆಯಬೇಕಿರುವುದು ಅಗತ್ಯ. ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ಈ ಅಧ್ಯಾದೇಶದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಮಾಡಿದೆ. ದಿನಾಂಕ 30.04.2019 ರಂದು ಬೆಂಗಳೂರು ನಗರದ ಉದಯ ಸೌಹಾರ್ದ ಸಹಕಾರಿಯ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಕೇಂದ್ರದ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಅಧ್ಯಾದೇಶ ಸಹಕಾರಿಗಳಲ್ಲಿ/ ಸಹಕಾರಿ ಸಂಘಗಳಲ್ಲಿ ಸದಸ್ಯರ ಠೇವಣಿ ಸುರಕ್ಷಿತ : ಮುಗ್ಧ ಸದಸ್ಯರಿಗೆ ಮೋಸ ಮಾಡುವವರ ಮೇಲೆ ಉಗ್ರ ಕ್ರಮ. ಸಹಕಾರಿ ಕ್ಷೇತ್ರದ ವಿಶ್ವಾಸಾರ್ಹತೆಯಲ್ಲಿ ಹೆಚ್ಚಳ

ಆತ್ಮೀಯ ಸಹಕಾರಿ ಬಂಧುಗಳೇ,

ಎಲ್ಲರಿಗೂ ಕಾರ್ಮಿಕ ದಿನಾಚರಣೆಯ, ಬಸವ ಜಯಂತಿಯ, ಅಕ್ಷಯ ತೃತಿಯ, ಬುದ್ಧ ಪೂರ್ಣಿಮೆ ದಿನದ ಶುಭಾಶಯಗಳು. ರಾಜ್ಯದ ಸೌಹಾರ್ದ ಸಹಕಾರಿಗಳ ಸಂಖ್ಯೆ ಈಗ 4643, ಸದಸ್ಯರ ಸಂಖ್ಯೆ 60 ಲಕ್ಷ, ಪಾಲು ಬಂಡವಾಳ 734 ಕೋಟಿ, ಸದಸ್ಯರ ಠೇವಣಿ 17,907 ಕೋಟಿ, ದುಡಿಯುವ ಬಂಡವಾಳ 20,416 ಕೋಟಿ, ಸಹಕಾರಿಗಳ ಲಾಭಾಂಶ 263 ಕೋಟಿ, ಪ್ರತಿ ವರ್ಷ ಈ ಕ್ಷೇತ್ರದಲ್ಲಿ ನೊಂದಾಯಿತವಾಗುತ್ತಿರುವ ಸಹಕಾರಿಗಳ ಸಂಖ್ಯೆ ಸರಾಸರಿ 400. ಕಳೆದ ವರ್ಷದಲ್ಲಿ ನೊಂದಾಯಿತವಾಗಿರುವ ಸಹಕಾರಿಗಳ ಸಂಖ್ಯೆ 321, ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ಸಾಂಪ್ರದಾಯಿಕ ಸಹಕಾರಿ ಸಂಸ್ಥೆಗಳಿಗಿಂತ ವಿಭಿನ್ನ ಹಾಗೂ ವೈಶಿಷ್ಠಪೂರ್ಣ. ಈ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಅನೇಕರು ಸಂತೋಷ ವ್ಯಕ್ತಪಡಿಸುತ್ತಿದ್ದಾರೆ. ಕೆಲವೇ ಕೆಲವು ಸೌಹಾರ್ದ ಸಹಕಾರಿಗಳಲ್ಲಿ ಸದಸ್ಯರಿಂದ ಠೇವಣಿಗಳನ್ನು ಪಡೆದು ಸಕಾಲದಲ್ಲಿ ವಾಪಸ್ಸು ಮಾಡದೇ ಮೋಸ ಮಾಡಿರುವ ಉದಾಹರಣೆಗಳಿಂದಾಗಿ ಇದರ ಸುಸ್ಥಿರ ಬೆಳವಣಿಗೆಯ ಬಗ್ಗೆ ಕಳವಳವನ್ನು ವ್ಯಕ್ತ ಪಡಿಸುತ್ತಿದ್ದಾರೆ.

ಆದರೆ ಇತ್ತೀಚೆಗೆ ಕೇಂದ್ರ ಸರಕಾರ ಹೊರಡಿಸಿರುವ "ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಅಧ್ಯಾದೇಶ" ಎಲ್ಲರೂ ನಿಟ್ಟುಸಿರು ಬಿಡುವಂತಾಗಿದೆ. ಈ ಅಧ್ಯಾದೇಶ ದೇಶದ ಬೇರೆಲ್ಲ ಹಣಕಾಸು ವ್ಯವಹಾರ ಮಾಡುವ ಸಂಸ್ಥೆಗಳಂತೆ ಸಹಕಾರಿ ಸಂಸ್ಥೆಗಳಿಗೂ ಅನ್ವಯಿಸುತ್ತದೆ. ಸಹಕಾರಿ ಸಂಸ್ಥೆಗಳು ಸದಸ್ಯರಿಂದ ವಿವಿಧ ಯೋಜನೆಗಳ ಅಡಿಯಲ್ಲಿ ತೆಗೆದುಕೊಳ್ಳುವ ಯಾವುದೇ ಹಣವನ್ನು (ಷೇರು ಮೊಬಲಗು ಹೊರತುಪಡಿಸಿ) ಸಕಾಲದಲ್ಲಿ ವಾಪಸ್ಸು ಕೊಡದಿದ್ದರೆ ದಂಡ ಹಾಗೂ ಕಾರಾಗ್ರಹ ವಾಸಗಳಂತಹ ಶಿಕ್ಷೆಯನ್ನು ನೀಡಲು ಅವಕಾಶವಿದೆ. ಹೀಗಾಗಿ ಯಾವುದೇ ಸಹಕಾರಿ ಸಂಸ್ಥೆಗಳು ಇನ್ನು ಮುಂದೆ ಸಹಕಾರಿಗಳ ಠೇವಣಿ ಯೊಜನೆಗಳಲ್ಲಿ ಹಣ ತೊಡಗಿಸಲು ಹಿಂಜರಿಯಬೇಕಿಲ್ಲ. ಇದಕ್ಕಾಗಿ ಕೇಂದ್ರ ಸರಕಾರ ಸಕ್ಷಮ್ಯ ಪ್ರಾಧಿಕಾರ ರಚಿಸುತ್ತದೆ. ಈ ಪ್ರಾಧಿಕಾರದವರು ನಿರ್ದಾಕ್ಷಿಣ್ಯವಾಗಿ ಮೋಸಗಾರರ ಮೇಲೆ ಕ್ರಮ ಜರುಗಿಸುತ್ತಾರೆ. ಇದರ ಪರಿಣಾಮವಾಗಿ ಸೌಹಾರ್ದ ಸಹಕಾರಿಗಳ/ಸಹಕಾರಿ ಸಂಸ್ಥೆಗಳ ಠೇವಣಿಯು ಸುರಕ್ಷಿತ ಮತ್ತು ವಿಶ್ವಾಸಾರ್ಹ. ಆದ್ದರಿಂದ ಈ ಅಧ್ಯಾದೇಶ ಸ್ವಾಗತಾರ್ಹ. ಸಹಕಾರಿ ಕ್ಷೇತ್ರದವರು ಸ್ವಯಂ ನಿಯಂತ್ರಣವನ್ನು ಮಾಡಿಕೊಳ್ಳದೇ ವಿಫಲರಾದಾಗ ಕೇಂದ್ರ ಸರಕಾರ ಈ ರೀತಿಯ ಕಾನೂನನ್ನು ರಚಿಸಲು ಈ ಅಧ್ಯಾದೇಶ ಹೊರಡಿಸಿರುವುದು ಸಹಕಾರಿ ಕ್ಷೇತ್ರದ ಹಿತರಕ್ಷಣೆಗಾಗಿಯೇ ಎಂದು ಭಾವಿಸುವುದು ಅಗತ್ಯ. ಸ್ವಾಯತ್ತತೆಯನ್ನು ದುರುಪಯೋಗಮಾಡಿಕೊಂಡು ಮುಗ್ಧಜನರನ್ನು ಮೋಸಮಾಡುವವರಿಗೆ ಈ ಅಧ್ಯಾದೇಶ ಅಗತ್ಯವಾಗಿತ್ತು.

ಈ ಅಧ್ಯಾದೇಶದ ಬಗ್ಗೆ ಸಾರ್ವಜನಿಕರಲ್ಲಿ ಹಾಗೂ ಸಹಕಾರಿಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯ ಎಲ್ಲ ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಸಹಕಾರಿ ಸಂಸ್ಥೆಗಳಿಂದ ತ್ವರಿತಗತಿಯಲ್ಲಿ ನಡೆಯಬೇಕಿರುವುದು ಅಗತ್ಯ. ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ಈ ಅಧ್ಯಾದೇಶದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಮಾಡಿದೆ. ದಿನಾಂಕ 30.04.2019 ರಂದು ಬೆಂಗಳೂರು ನಗರದ ಉದಯ ಸೌಹಾರ್ದ ಸಹಕಾರಿಯ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗು ಬೆಂಗಳೂರು ವಿಭಾಗದ ಸೌಹಾರ್ದ ಸಹಕಾರಿಗಳ 200ಕ್ಕೂ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿ ಪ್ರಯೋಜನ ಪಡೆದಿರುವುದು ಸ್ವಾಗತಾರ್ಹ. ಈ ಅಧ್ಯಾದೇಶದ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ತಿಳುವಳಿಕೆಯನ್ನು ಮೂಡಿಸಲು ಪ್ರಯತ್ನಿಸಿದಲ್ಲಿ ಸಹಕಾರಿಗಳಲ್ಲಿ ಸದಸ್ಯರು ನಿರಾತಂಕವಾಗಿ ನಿರ್ಭಯವಾಗಿ ಠೇವಣಿಗಳನ್ನು ಇಡಲು ಸಾಧ್ಯವಾಗುತ್ತದೆ ವಿಶ್ವಾಸಾರ್ಹತೆ ಹೆಚ್ಚುತ್ತದೆ. ಸಹಕಾರಿಗಳ ಬಂಡವಾಳ ಕೊರತೆ ನೀಗುತ್ತದೆ. ವೈವಾಟು ಜಾಸ್ತಿಯಾಗಿ ಸಹಕಾರಿಗಳ ಅಭಿವೃದ್ಧಿ ಸಾಧ್ಯವಾಗುತ್ತದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಈ ಅಧ್ಯಾದೇಶದ ಬಗ್ಗೆ ಸಾರ್ವಜನಿಕರಲ್ಲಿ ತಿಳುವಳಿಕೆ ನೀಡಿ ತಮ್ಮ ಸಹಕಾರಿಯ ಅಭಿವೃದ್ಧಿಗೆ ಸೂಕ್ತ ಕ್ರಮವಿಡುವುದಾಗಿ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುವಿರಾಗಿ ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್: souharda@souharda.coop
swabhimani@souharda.coop
ವೆಬ್‌ಸೈಟ್: www.souharda.coop

ಒಳಪುಟಗಳಲ್ಲಿ. . .

ಜ್ಞಾನ ಜ್ಯೋತಿ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು 5–9
ಸೌಹಾರ್ದ ಸಹಕಾರಿಗಳ ಸಮಾಚಾರಗಳು 10–12
ನಿಮ್ಮ ಪ್ರಶ್ನೆ – ನಮ್ಮ ಉತ್ತರ 13
ಲೇಖನ.. 14–17
ಆರ್‌ಬಿ.ಐ. ನ್ಯೂಸ್...................... 18–20

ಸಂಪಾದಕೀಯ

ಸದಸ್ಯ ಸಹಕಾರಿಗಳಿಂದ ವರ್ಷಾಂತ್ಯದ ಆರ್ಥಿಕ ಮಾಹಿತಿ

ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಪ್ರತಿಯೊಂದು ಮಹಾಮಂಡಳಗಳು ತಮ್ಮದೇ ಆದ ರೀತಿಯಲ್ಲಿ ಕಾನೂನು ನಿಯಮಗಳ ಹಾಗೂ ಅವರದೇ ಆದ ಉಪವಿಧಿಗಳ ಅವಕಾಶದಲ್ಲಿ ಕಾರ್ಯನಿರ್ವಹಿಸುತ್ತವೆ. ಇವುಗಳು ಕೂಡ ತಮ್ಮ ಕ್ಷೇತ್ರದ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸುವುದು ಅಪೇಕ್ಷಿತ ಹಾಗೂ ಅಗತ್ಯ.

ಹಾಗೆಯೇ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿಯೂ ಕೂಡ ವರ್ಷಾಂತ್ಯದ ಮಾಹಿತಿಗಳ ಸಂಗ್ರಹಣೆ ಅಗತ್ಯ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ರಚಿತವಾಗಿರುವ ಸಂಸ್ಥೆ. ಸಂಯುಕ್ತ ಸಹಕಾರಿಯು ಶಾಸನ ಬದ್ಧ ಹಾಗೂ ನಿಯಂತ್ರಣಾತ್ಮಕ ಚಟುವಟಿಕೆಗಳನ್ನು ಹೊಂದಿದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಶಾಸನಾತ್ಮಕ ಚಟುವಟಿಕೆಗಳನ್ನು ಗಮನಿಸುವುದರ ಜೊತೆಗೆ ನಿಯಂತ್ರಣ ಹಾಗೂ ಶಿಕ್ಷಣ ಮತ್ತು ತರಬೇತಿ ಕಾರ್ಯಗಳನ್ನು ನಿರ್ವಹಿಸಬೇಕಾಗಿರುವುದರಿಂದ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಸಂಪೂರ್ಣ ಮಾಹಿತಿ ಸಂಯುಕ್ತ ಸಹಕಾರಿಯು ಇಟ್ಟುಕೊಳ್ಳಲೇಬೇಕು. ಹೀಗಾಗಿ ತನ್ನಲ್ಲಿರುವ ಎಲ್ಲ ರೀತಿಯ ಅವಕಾಶಗಳನ್ನು ಬಳಸಿ ಈ ಎಲ್ಲ ಮಾಹಿತಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಈ ಎಲ್ಲ ಮಾಹಿತಿಗಳು ಸಂಪೂರ್ಣವಾಗಿ ಸಂಗ್ರಹಿತವಾದಾಗ ಸಂಯುಕ್ತ ಸಹಕಾರಿಯು ಸರಕಾರಗಳೊಡನೆ, ಬೇರೆ ಬೇರೇ ಸಂಸ್ಥೆಗಳ ಜೊತೆಗೆ ವ್ಯವಹರಿಸುವಾಗ ಅವಶ್ಯಕವಾಗಿ ಉಪಯೋಗವಾಗುತ್ತದೆ. ಅಲ್ಲದೇ ರಾಜ್ಯದ ಸೌಹಾರ್ದ ಸಹಕಾರಿಗಳ ಮತ್ತು ಸಂಯುಕ್ತ ಸಹಕಾರಿಯ ಚಟುವಟಿಕೆಗಳನ್ನು ರಾಜ್ಯದ ಅನೇಕ ವಿಶ್ವ ವಿದ್ಯಾಲಯಗಳ ವಿದ್ಯಾರ್ಥಿಗಳು, ರಾಷ್ಟ್ರಮಟ್ಟದಲ್ಲಿ ಮತ್ತು ಅಂತರ ರಾಷ್ಟ್ರ ಮಟ್ಟದಲ್ಲಿ ಅಧ್ಯಯನ ವಿಷಯವನ್ನಾಗಿ ಆಯ್ಕೆ ಮಾಡಿಕೊಳ್ಳಲಾಗುತ್ತಿದೆ ಆದ್ದರಿಂದ ಈ ಕ್ಷೇತ್ರದ ಮಾಹಿತಿಗಳು ನಿಖರವಾಗಿರಬೇಕು ಮತ್ತು ಸಂಪೂರ್ಣವಾಗಿರಬೇಕು.

ಈ ಮಾಹಿತಿಗಳನ್ನು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ವರ್ಷಾಂತ್ಯದಲ್ಲಿ ಸಂಯುಕ್ತ ಸಹಕಾರಿಗೆ ಹಾಗೂ ನಿಬಂಧಕರಿಗೆ ಕಳುಹಿಸಿಕೊಡುವುದು ತಮ್ಮ ಪ್ರಥಮ ಕರ್ತವ್ಯವೆಂದು ಭಾವಿಸಿ ಕ್ರಮವಿಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ರಾಜ್ಯದ ಅರ್ಧಕ್ಕಿಂತ ಹೆಚ್ಚು ಸೌಹಾರ್ದ ಸಹಕಾರಿಗಳು ಕ್ರಮವಿಡುತ್ತಿದ್ದಾರೆ ಇನ್ನು ಕೆಲವು ಸೌಹಾರ್ದ ಸಹಕಾರಿಗಳು ಈ ಬಗ್ಗೆ ಕೂಡಲೇ ಕ್ರಮವಿಡುವಿರಾಗಿ ಸಂಯುಕ್ತ ಸಹಕಾರಿಯು ಬಯಸುತ್ತದೆ. ಹೆಚ್ಚಿನ ಮಾಹಿತಿ ಅಥವಾ ಈ ಬಗ್ಗೆ ಸಹಾಯದ ಅಗತ್ಯತೆ ಇದ್ದಲ್ಲಿ ಪ್ರಾಂತೀಯ ಕಚೇರಿಗಳ ಅಧಿಕಾರಿಗಳನ್ನು ಮತ್ತು ಜಿಲ್ಲಾ ಸಂಯೋಜಕರನ್ನು ಸಂಪರ್ಕಿಸಿ ಸೌಹಾರ್ದ ಸಹಕಾರಿಗಳು ಇವತ್ತಿನವರೆಗಿನ ಸಂಪೂರ್ಣ ಮಾಹಿತಿಯನ್ನು ಸಂಯುಕ್ತ ಸಹಕಾರಿಗೆ ಕಳುಹಿಸಲು ಕ್ರಮವಿಡುವಿರಾಗಿ ಅಪೇಕ್ಷಿಸಿದೆ.

ಜ್ಞಾನ ಜ್ಯೋತಿ

ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

"ಸ್ಥಿರತೆಯಿಂದ ಸುಖವನ್ನರಸಿ ನಿನ್ನದಾಗಿಸಿಕೋ"

ಸೃಷ್ಟಿಯಲ್ಲಿ ಹುಟ್ಟಿಬಂದಿರುವ ಪ್ರತಿಯೊಬ್ಬ ಮಾನವನು ಮಾತ್ರವೇ ಏನು ಪ್ರತಿ ಪ್ರಾಣಿಯೂ ಕೂಡ ಸುಖವನ್ನರಸುತ್ತದೆ. ನಿಜವಾದ ಸುಖವೇನೆಂದ–ರಿಯದೆ ಮಿಥ್ಯಾ ಸುಖದ ಭ್ರಮೆಯಲ್ಲೇ ಅಲೆದಲೆದು ಬಸವಳಿದು ಸುಸ್ತಾಗಿ ವ್ಯರ್ಥ ಪ್ರಯತ್ನದಲ್ಲಿ ತೊಡಗುವವರಾಗಿದ್ದೇವೆ. ಸುಖದ ಸೋಪಾನಗಳನ್ನು ಕಟ್ಟುತ್ತಾ ಜಾರಿ ಬೀಳುವವರೇ ಜಾಸ್ತಿಯಾಗಿರುವ ಈ ಜಗತ್ತಿನಲ್ಲಿ ಸೌಭಾಗ್ಯಗಳನರಸಿ ದೌರ್ಭಾಗ್ಯಕ್ಕೀಡಾಗುವುದು ಮನುಷ್ಯ ಜನ್ಮಕ್ಕೆ ದೈವದ ಶಾಪವೆಂದೋ ಎನಿಸಿಬಿಟ್ಟಿದೆ. ಇಂಥಹ ದೈನಂದಿನ ಜೀವನದ ದುರಂತಗಳಿಗೆ ಮಾನವನ ಸತ್ವಯುತ ಚಿಂತನಾ ಕೊರತೆಯೇ ಕಾರಣವೆಂದೂ, ನಿಜವಾದ ಸುಖದ ನೆಲೆಯನ್ನರಿಯದಿರುವುದೇ ಮೂಲ ಕಾರಣವೆಂದು ಅಭಿಪ್ರಾಯಿಸಲಾಗಿದೆ. ಮಾನವನು ಸಹಜವಾಗಿ ಆಸೆಗಳ ರಾಶಿಗಳನ್ನೇ ಹೊಂದಿರುತ್ತಾನೆ. ಜೊತೆಗೆ ಒಂದು ಸುಖ ದೊರೆತಾಗ ಮತ್ತೊಂದನ್ನು ನೆನೆದು ಇದಕ್ಕಿಂತ ದೂರದಲ್ಲಿರುವುದು ಚೆನ್ನವೇನೋ ಎಂದೆಣಿಸಿ ಪ್ರಸಕ್ತ ದೊರಕಿರುವ ಸುಖದ ಲಾಭವನ್ನು ಪಡೆಯದವನಾಗುತ್ತಾನೆ. ದೊರೆತ ಸುಖವನ್ನು ಸುಖಿಸದೇ, ಬರದಿರುವ ಸುಖದ ಭ್ರಮೆಯಲ್ಲೇ ಕಾಲಹರಣ ಮಾಡಿ ಕೊನೆಯವರೆಗೂ ಮರೀಚಿಕೆಯನ್ನು ಅರಸುತ್ತಾ, ಅಲೆದಲೆದು ಅವಿಶ್ರಾಂತನಾಗುತ್ತಾನೆ. ಇಂಥಹ ಮನಃಸ್ಥಿತಿಯ ವ್ಯಕ್ತಿಯ ಅನುಭವವನ್ನು ಒಂದು ಹಸುವಿನ ಕರುವಿನ ಉದಾಹರಣೆಯನ್ನೊಳಗೊಂಡ ಪದ್ಯದ ಮೂಲಕ ಡಿ.ವಿ.ಜಿ.ಯವರು ವಿವರಿಸಿದ್ದಾರೆ. ಪದ್ಯದ ಲಹರಿ ಲಾಲಿತ್ಯಪೂರ್ಣವಾಗಿ ಚೆಂಗುಚೆಂಗೆಂದು ನೆಗೆಯುವ ಕರುವಿನ ಪರಿಯನ್ನೇ ಹೋಲುತ್ತದೆ.

"ಇಲ್ಲಿ ಚೆನ್ನಲ್ಲಿ ಚೆನ್ನಲ್ಲೋ ಚೆನ್ನೆನುತೆಣಿಸಿ ।
ಹುಲ್ಲು ಬಯಲೊಂದೆಡೆಯಿನೊಂದಕ್ಕೆ ನೆಗೆದು
ಮೆಲ್ಲದೆಯೆ ಧಾವಿಸುತ ದಣಿವ ಕರುವನು ಪೋಲ್ತೋ ।
ಡೆಲ್ಲಿಯೋ ಸುಖ ನಿನಗೆ" ॥ಮಂಕುತಿಮ್ಮ॥

ದುರಾಸೆಗೊಳಗಾದ ಮನುಷ್ಯನು ಎಂದೂ ಶಾಶ್ವತ ಸುಖವನ್ನು ಪಡೆಯುವುದಿಲ್ಲ. ಬದಲಿಗೆ ಬಳಲಿಕೆಯೇ ಅವನಿಗೊದಗಿ ಅವಿಶ್ರಾಂತನಾಗುತ್ತಾನೆ. ಬಂದದ್ದನ್ನು ಸ್ವೀಕರಿಸುವ ಮನೋಪ್ರವೃತ್ತಿಯನ್ನು ಬೆಳೆಸಿಕೊಂಡಲ್ಲಿ ನಿರೀಕ್ಷಿತ ಸುಖ ದೊರೆಯುತ್ತದೆ. 'ಬಾರದು ಬಪ್ಪದು, ಬಪ್ಪದು ತಪ್ಪದು" ಎಂಬ ದೈವೀ ನಿರ್ಣಯವನ್ನು ನಂಬಿ ಕಾರ್ಯನಿತರನಾದವನಿಗೆ ಸರ್ವಸೌಭಾಗ್ಯಗಳೂ ಬಂದೊದಗುತ್ತವೆ ಎಂಬುದು ಚಿಂತನಾಶೀಲರ ಅಂಬೋಣ.

"ಜೀವನವನ್ನು ಒಪ್ಪಿಕೋ, ಜೀವನವನ್ನು ಅಪ್ಪಿಕೋ", ಏಕೆಂದರೆ ಅದು ಭಗವಂತನಿಂದ ನೀಡಲ್ಪಟ್ಟಿದ್ದಾಗಿದೆ. ದೊರೆತುದನು ಪ್ರಸಾದವೆಂದುಣ್ಣು, ಬಂದುದನು ಮನಸಾರೆ ಒಪ್ಪಿಕೋ, ಬಂದಿರುವುದಕ್ಕಾಗಿ ಹಾತೊರೆದು, ಬಾರದಿದ್ದಾಗ ನಿರಾಸೆಗೊಳಗಾಗುವುದರ ಬದಲು ಲಭ್ಯವಾಗಿರುವುದರಿಂದ ತೃಪ್ತಿಪಟ್ಟುಕೋ. ಹುಲ್ಲುಗಾವಲಿಗೆ ಬಂದ ಕರು ಹುಲ್ಲು ದೊರೆತ ಕಡೆ ಮೇದು ಸುಖವಾಗಿರುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. ಬದಲಾಗಿ ದೂರದ ಹುಲ್ಲನ್ನು ನೋಡಿ ಅದು ಚೆನ್ನಾಗಿದೆಯೆಂದು ದೊರೆತುದ್ದುದನ್ನು ಬಿಟ್ಟು ಅಲೆಯುವುದು ಬೇಡ. ಇದನ್ನರಿತೋ ಏನೋ "ಬೇಕಿನಿಸುದೊಂದೆನಗೆ ವಿಧಿಗೈಯ್ಯುವುದಿನ್ನೊಂದು" ಎಂದು ಉವಾಚಿಸಿರಬೇಕು. ಒಟ್ಟಾರೆ ಸಾರಾಂಶವೆಂದರೆ ವರ್ತಮಾನದಲ್ಲಿ ಮನಸ್ಸನ್ನಿಟ್ಟು ಶುದ್ಧತೆಯತ್ತ ಗಮನಹರಿಸಿ ಸಾರ್ಥಕರಾಗುತ್ತಾ ಗುರಿಯನ್ನು ತಲುಪಿರೆಂಬುದು ಕವಿ ಮಾತಾಗಿದೆ. ಕಳೆದುಕೊಂಡದ್ದನ್ನು ಕಳೆದುಕೊಂಡಲ್ಲಿಯೇ ಹುಡುಕಿದರೆ ಅದು ಸಿಗುವ ಸಾಧ್ಯತೆ ಜಾಸ್ತಿ. ಸ್ಥಿರಪ್ರಯತ್ನದಿಂದ ವಿಚಲಿತನಾಗದೇ ಹಾಗೂ ಪ್ರಾಮಾಣಿಕ ಯತ್ನವನ್ನೆಸಗೆಂಬುದು ಚಿಂತನಶೀಲರ ಅಭಿಪ್ರಾಯ. ತತ್ಕಾರಣ ಈ ಪದ್ಯದ ಸಾರಾಂಶವನ್ನು ಅರ್ಥೈಸಿಕೊಂಡು ಎಲ್ಲಿದ್ದೇವೋ ಅಲ್ಲಿಂದಲೇ ನಮ್ಮ ಕರ್ತವ್ಯದ ಪಾವಿತ್ರ್ಯತೆಯನ್ನು ಹೆಚ್ಚಿಸಿಕೊಂಡು ಸರ್ವಜೀವಿಗಳಿಗೆ ಲೇಸನ್ನು ಬಯಸುವ "ಸಹಕಾರ ಕ್ಷೇತ್ರದ ಗುರಿಯಂತೆ ಎಲ್ಲರಿಗಾಗಿ ತಾನು, ತಾನು ಎಲ್ಲರಿಗಾಗಿ" ಎಂದುಕೊಂಡು ಸರ್ವೇಜನಾಃ ಸುಖಿನೋ ಭವಂತು ಎಂಬ ಉದಾರ ಗುಣವನ್ನು ತಳೆಯೋಣವೆಂಬುದಾಗಿದೆ.

ಸಂಯುಕ್ತ ಸಹಕಾರಿಯ ಜಿಲ್ಲಾ ಸಂಯೋಜಕರಿಗಾಗಿ ತರಬೇತಿ ಕಾರ್ಯಕ್ರಮ

ಬೆಂಗಳೂರು: ದಿನಾಂಕ 19.04.2019 ರ ಶುಕ್ರವಾರ ಸಮಯ 10:30 ಗಂಟೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇದರ ವತಿಯಿಂದ ಎರಡು ದಿನಗಳ ಸಂಯುಕ್ತ ಸಹಕಾರಿ ಜಿಲ್ಲಾ ಸಂಯೋಜಕರಿಗಾಗಿ ತರಬೇತಿ ಕಾರ್ಯಗಾರವನ್ನು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಾಹಣಾ ಸಂಸ್ಥೆ, ಬೆಂಗಳೂರು. ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ತರಬೇತಿ ಕಾರ್ಯಗಾರದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್ ಇವರು ನೇರವೆರಿಸಿದರು. ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಮಾತನಾಡಿ ಜಿಲ್ಲಾ ಸಂಯೋಜಕರ ನೇಮಕಾತಿಯ ನಂತರ ಸೌಹಾರ್ದ ಚಳುವಳಿ ಪ್ರತಿ ಜಿಲ್ಲೆ ಮತ್ತು ತಾಲೂಕಿನ ಮಟ್ಟದಲ್ಲಿ ಸಹಕಾರಿಗಳ ಬೆಳವಣಿಗೆಗೆ ಪೂರಕವಾಗಿದೆ ಎಂದರು. ಎಲ್ಲಾ ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಸಂಯುಕ್ತ ಸಹಕಾರಿಯ ಧ್ಯೇಯ, ದೃಷ್ಠಿ ಮತ್ತು ಮೌಲ್ಯಗಳ ಕುರಿತು ನಾಮಫಲಕ ಹಾಕಲು ತಿಳಿಸಿದರು. ಮತ್ತು ಅವುಗಳ ಕಾರ್ಯಗತಗೊಳಿಸಲು ಸೂಚಿದರು. ಸಹಕಾರಿಗಳ ಗುಣಮಟ್ಟವನ್ನು ಹೆಚ್ಚಿಸುವ ಹಾಗೂ ನಷ್ಟದಲ್ಲಿರುವ ಸಹಕಾರಿಗಳನ್ನು ಲಾಭದತ್ತ ಬರುವಂತೆ ಯೋಜನೆಗಳನ್ನು ರೂಪಿಸಿಕೊಳ್ಳುವಂತೆ ಸಲಹೆ ನೀಡಿದರು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡುರಾವ ಅವರು ಮಾತನಾಡಿ ಮುಂಬರುವ ದಿನಗಳಲ್ಲಿ ಸಹಕಾರಿಗಳಿಗೆ ಅನೇಕ ಸವಾಲುಗಳು ಎದುರಾಗಲಿವೆ ಅದರಲ್ಲಿ ಪ್ರಮುಖವಾಗಿ ಆದಾಯ ತೆರಿಗೆ, ಅನಿಯಂತ್ರಿತ ತೆರಿಗೆಗಳ ನಿಷೇಧ, ಜಿ.ಎಸ್.ಟಿ ಮುಂತಾದ ಕಾಯ್ದೆಗಳು ಸಹಕಾರಿಗಳಿಗೆ ಅನ್ವಯಿಸುವುದರಿಂದ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರುಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ತರಬೇತಿ ಮತ್ತು ಮಾರ್ಗದರ್ಶನದ ಅವಶ್ಯಕತೆ ಇದೆ ಎಂದು ನುಡಿದರು. ಮುಂಬರುವ ದಿನಗಳಲ್ಲಿ ಜಿಲ್ಲಾ ಸಂಯೋಜಕರು ಪ್ರತಿಯೊಂದು ಸಹಕಾರಿಯ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರೊಂದಿಗೆ ಉತ್ತಮ ಸೌಹಾರ್ದಯುತ ಸಂಬಂಧ ಹೊಂದುವ ಮೂಲಕ ತರಬೇತಿಗೆ ಬರುವವರ ಸಂಖ್ಯೆ ಹೆಚ್ಚಿಸಬೇಕು ಎಂದು ನುಡಿದರು. ಸಂಯುಕ್ತ ಸಹಕಾರಿಯ ಸಿಬ್ಬಂದಿಯ ಕುರಿತು ಆಡಳಿತ ಮಂಡಳಿಯು ಅಪಾರವಾದ ವಿಶ್ವಾಸಹೊಂದಿದೆ ಅವರ ನಿರೀಕ್ಷೆಯಂತೆ ಕಾರ್ಯಚಟುವಟಿಕೆ ಕೈಗೊಳ್ಳುವಂತೆ ಸಲಹೆ ನೀಡಿದರು.

ವೇದಿಕೆಯ ಮೇಲೆ ಉಪಪ್ರಧಾನ ವ್ಯವಸ್ಥಾಪಕರು ಹಾಗೂ ಬೆಂಗಳೂರು ಪ್ರಾಂತದ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ, ಬೆಳಗಾವಿ ಪ್ರಾಂತದ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ, ತರಬೇತಿ ಅಧಿಕಾರಿಯಾದ ಶ್ರೀ ವಿ. ಜೆ. ಕಾರಕೂನ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್. ಜಿ. ಜೋಷಿ ಉಪಸ್ಥಿತರಿದರು. ಜಿಲ್ಲಾ ಸಂಯೋಜಕರಾದ ಶ್ರೀ ಕಲ್ಮೇಶ ಅವರು ಪ್ರಾರ್ಥಿಸಿದರು ಶ್ರೀ ಶಿವಕಾಂತರವರು ಸ್ವಾಗತಿಸಿದರು, ನಾಗರಾಜ ಅವರು ವಂದಿಸಿದರು. ಶ್ರೀ ಸಂತೋಷಕುಮಾರ ಅವರು ನಿರೂಪಿಸಿದರು. ನಂತರ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್.ಜಿ.ಜೋಷಿ ಇವರು ದಾವಾ ದಾಖಲಾತಿ ವಿಧಾನ ಮತ್ತು ಸಾಲದ ಪತ್ರಗಳ ದಾಖಲೆಗಳ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಶ್ರೀ ಹೆಚ್. ಎಸ್. ನಾಗರಾಜಯ್ಯ ನಿವೃತ ಅಪರ ನಿಬಂಧಕರು ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆ ಮತ್ತು ವಿಚಾರಣೆ ಕುರಿತು ಉಪನ್ಯಾಸ ನೀಡಿದರು.

ಎರಡನೇ ದಿನದ ಅವಧಿಯಲ್ಲಿ ಬೆಳಿಗ್ಗೆ 6:30ರಿಂದ 7:30ರ ವರಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಜಿಲ್ಲಾ ಸಂಯೋಕರೊಂದಿಗೆ ಚಾಯ್ ಪೆ ಚರ್ಚಾ ಭಾಗವಾಗಿ ರಾಜ್ಯದ ವಿವಿಧ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಮಸ್ಯೆಗಳು ಅವುಗಳಿಗೆ ಪರಿಹಾರ ಮಾರ್ಗಗಳ ಕುರಿತು ಮುಕ್ತವಾಗಿ ಚರ್ಚಿಸಲಾಯಿತ್ತು ಹಾಗೂ 2020 ಜನವರಿ ವೇಳೆಗೆ ರಾಜ್ಯದಲ್ಲಿರುವ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದು ಸೌಹಾರ್ದ ಸಹಕಾರಿ ನೊಂದಣಿಯಾಗಿರಬೇಕು. ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಸ್ವಾಯತ್ತತೆ, ಸ್ವಾತಂತ್ರ್ಯ ವಿರುವುದರಿಂದ ರಾಜ್ಯದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದು ಗ್ರಾಹಕ (consumer) ಸೌಹಾರ್ದ ಸಹಕಾರಿ ಹಾಗೂ ಒಂದು ಮಹಿಳಾ ಸೌಹಾರ್ದ ಸಹಕಾರಿ ನೊಂದಣಿ ಮಾಡಲು ಜಿಲ್ಲಾ ಸಂಯೋಜಕರಿಗೆ ಕಾರ್ಯಯೋಜನೆಯನ್ನು ಸೂಚಿಸಿದರು.

ಬೆಳಿಗ್ಗೆ ಮೊದಲನೆಯ ಅವಧಿಯಲ್ಲಿ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಆಧ್ಯಾದೇಶ 2019 ರ ಕುರಿತು ಶ್ರೀ ಶ್ರೀಕಾಂತ ಬರುವೆ ಉಪನ್ಯಾಸ ನೀಡಿದರು. ಸಂಯುಕ್ತ ಸಹಕಾರಿಯ ಶಾಸನಬದ್ದ ಕರ್ತವ್ಯಗಳು ಮತ್ತು ವಿಶೇಷಾಧಿಕಾರಿ ಜಿಲ್ಲಾ ಸಂಯೋಜಕರ ಕರ್ತವ್ಯ ಜವಾಬ್ದಾರಿ ಕುರಿತು ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಮತ್ತು ಶ್ರೀ ರಘುನಂದನ ಅವರು ಉಪನ್ಯಾಸ ನೀಡಿದರು.

ತರಬೇತಿಯ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಅವರು ಮಾತನಾಡಿ ಸೌಹಾರ್ದ ಸಹಕಾರಿ ಚಳುವಳಿ ಇಂದು ಪ್ರತಿ ಜಿಲ್ಲೆ ಪ್ರತಿ ತಾಲೂಕು ಮತ್ತು ಗ್ರಾಮಗಳಿಗೆ ಬೆಳೆದು ಸಹಕಾರಿಯ ನಿಜವಾದ ಅರ್ಥವನ್ನು ಜನರ ಬಳಿಗೆ ಚಳುವಳಿ ತಲುಪಿದೆ ಎಂದರು, ತರಬೇತಿಯಲ್ಲಿ ಚರ್ಚಿಸಿದ ವಿಷಯಗಳ ಕುರಿತು

ಸಂಯೋಜಕರೊಂದಿಗೆ ಚರ್ಚಿಸಿದರು. ಕಾಲ ಕಾಲಕ್ಕೆ ಶಾಸನಬದ್ಧ ಕಾರ್ಯಚಟುವಟಿಕೆ ಯಾರ ಒತ್ತಡವಿಲ್ಲದೆ ನಿರ್ವಹಿಸುವಂತೆ ಕರೆ ನೀಡಿದರು. ನೋಂದಣಿ/ಚುನಾವಣೆ ಹಾಗೂ ಸಮಾಪನಾ ಕಾರ್ಯಗಳನ್ನು ಶೀಘ್ರವಾಗಿ ನಿರ್ವಹಿಸುವಂತೆ ಸೂಚಿಸಿದರು. ಯಾವುದೇ ಕಾರಣಕ್ಕೂ ಸಮಸ್ಯೆ ಇರುವಂತ ಸೌಹಾರ್ದ ಸಹಕಾರಿ ಜಿಲ್ಲೆಯಲ್ಲಿ ಹುಟ್ಟಿಕೊಳ್ಳದಂತೆ ಕ್ರಮವಿಡಲು ಸೂಚಿಸಿದರು.

ಈ ಎರಡು ದಿನದ ತರಬೇತಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಸಂಯೋಜಕರು, ಪ್ರಾಂತೀಯ ವ್ಯವಸ್ಥಾಪಕರು, ಹಾಗೂ ವ್ಯವಸ್ಥಾಪಕರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

ಮಾನ್ಯ ಅಧ್ಯಕ್ಷರೊಂದಿಗೆ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು

ಬೆಂಗಳೂರು ಹಾಗೂ ಬೆಳಗಾವಿಯಲ್ಲಿ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೆಜ್‌ಮೆಂಟ್ ಡಿಪ್ಲೋಮಾ (ದೂರ ಶಿಕ್ಷಣ) ಮೊದಲನೇ ತಂಡದ ಎರಡನೇ ಕಂಟ್ಯಾಕ್ಟ್ ತರಗತಿ ಕಾರ್ಯಕ್ರಮ

ಬೆಂಗಳೂರು: ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಪ್ರಾರಂಭಿಸಿರುವ ಸಹಕಾರ ಮತ್ತು ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ದೂರ ಶಿಕ್ಷಣ ಕುರಿತಾದ ಎರಡನೇಯ ಸಂಪರ್ಕ ತರಬೇತಿಯು ದಿನಾಂಕ 27.04.2019 ಮತ್ತು 28.04.2019 ರಂದು "ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ" ಬೆಂಗಳೂರು ಇಲ್ಲಿ ಜರುಗಿತು.

ದಿನಾಂಕ 27.04.2019ರಂದು ಬೆಳಗಿನ ಅವಧಿಯಲ್ಲಿ ಸಹಕಾರ ಕಾನೂನು ಮತ್ತು ಸಹಕಾರ ಪತ್ತು ನಿರ್ವಹಣೆ ಕುರಿತು ಶ್ರೀ ಶಶಿಧರ್ ಎಲೆಯವರು, ಬ್ಯಾಂಕಿಂಗ್ ಕಾಯ್ದೆಗಳು ಕುರಿತು ಶ್ರೀ ಬಿ.ಎಸ್ ಚಂದ್ರಶೇಖರ್‌ರವರು ಹಾಗೂ ಮಧ್ಯಾಹ್ನದ ಅವಧಿಯಲ್ಲಿ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನೆ ಕುರಿತು ಶ್ರೀ ಎಸ್.ಎ ಸಿದ್ಧಾಂತಿಯವರು ತರಗತಿಯನ್ನು ನಡೆಸಿಕೊಟ್ಟರು. ಸದರಿ ತರಬೇತಿಯಲ್ಲಿ 92 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 28.04.2019ರಂದು ಬೆಳಗಿನ ಅವಧಿಯಲ್ಲಿ ಬ್ಯಾಂಕಿಂಗ್ ಮೂಲ ಮಾಹಿತಿ ಹಾಗೂ ಮಾಹಿತಿ ತಂತ್ರಜ್ಞಾನ ಕುರಿತು ಶ್ರೀ ಜಿ.ಎಸ್ ರವೀಂದ್ರ ಹಾಗೂ ಮಧ್ಯಾಹ್ನದ ಅವಧಿಯಲ್ಲಿ ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ಮತ್ತು ಲೆಕ್ಕಪತ್ರಗಳು ಹಾಗೂ ಲೆಕ್ಕ ಪರಿಶೋಧನೆ ಕುರಿತು ಶ್ರೀ ಎಸ್.ಎ ಸಿದ್ಧಾಂತಿಯವರು ತರಗತಿಯನ್ನು ನಡೆಸಿಕೊಟ್ಟರು. ಸದರಿ ತರಬೇತಿಯಲ್ಲಿ 93 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ಬೆಳಗಾವಿ: ದಿನಾಂಕ 27.04.2019 ಮತ್ತು 28.04.2019 ರಂದು ಬೆಲ್ಲದ ಬಾಗೇವಾಡಿಯಲ್ಲಿ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೆಜ್ ಮೆಂಟ್ ಡಿಪ್ಲೋಮಾ (ದೂರ ಶಿಕ್ಷಣ) ಮೊದಲನೇ ತಂಡದ ಎರಡನೇಯ ಕಂಟ್ಯಾಕ್ಟ್ ತರಗತಿಗಳು ಜರುಗಿದವು.

ದಿನಾಂಕ 27.04.2019 ರಂದು ಬೆಳಗಿನ ಅವಧಿಯಲ್ಲಿ ಶ್ರೀ ಹೆಚ್. ಎಸ್.ನಾಗರಾಜಯ್ಯ, ಅಪರ ನಿಬಂಧಕರು(ನಿ) ಬೆಂಗಳೂರು, ಇವರು 'ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ' ವಿಷಯದ ಕುರಿತು ಉಪನ್ಯಾಸ ನಡೆಸಿಕೊಟ್ಟರು. ಮತ್ತು ಮಧ್ಯಾಹ್ನದ ಅವಧಿಯಲ್ಲಿ ಶ್ರೀ ಎಸ್.ಜಿ.ಕುಲಕರ್ಣಿ, ಬ್ಯಾಂಕಿಂಗ್ ತಜ್ಞರು ಬೆಂಗಳೂರು, ಇವರು 'ಬ್ಯಾಂಕಿಂಗ್ ಮೂಲ ಮಾಹಿತಿ' ವಿಷಯದ ಕುರಿತು ಉಪನ್ಯಾಸವನ್ನು ನಡೆಸಿಕೊಟ್ಟರು.

ದಿನಾಂಕ 28.04.2019 ರಂದು ಬೆಳಗಿನ ಅವಧಿಯಲ್ಲಿ ಎಸ್.ಜಿ.ಕುಲಕರ್ಣಿ, ಬ್ಯಾಂಕಿಂಗ್ ತಜ್ಞರು ಬೆಂಗಳೂರು, ಇವರು 'ಮಾಹಿತಿ ತಂತ್ರಜ್ಞಾನ' ವಿಷಯದ ಕುರಿತು ಉಪನ್ಯಾಸ ನೀಡಿರುತ್ತಾರೆ ಮತ್ತು ಮಧ್ಯಾಹ್ನದ ಅವಧಿಯಲ್ಲಿ ಶ್ರೀ

ಸುನೀಲ ಪತ್ತಾರ ಇವರು 'ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ' ವಿಷಯದ ಕುರಿತು ಉಪನ್ಯಾಸವನ್ನು ಅಭ್ಯರ್ಥಿಗಳಿಗೆ ಪ್ರಾಯೋಗಿಕವಾಗಿ ತಿಳಿಸಿಕೊಟ್ಟಿರುತ್ತಾರೆ.

ಈ ತರಬೇತಿಯಲ್ಲಿ ಸಂಯುಕ್ತ ಸಹಕಾರಿಯ ಬೆಳಗಾವಿ ಪ್ರಾಂತದ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಕೇಂದ್ರ ಕಛೇರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆ.ರಘುನಂದನ್, ಇವರು ಉಪಸ್ಥಿತರಿದ್ದರು.

ಪಟ್ಟಣ ಸಹಕಾರ ಬ್ಯಾಂಕುಗಳ ಸಭೆ

ಬೆಂಗಳೂರು: ದಿನಾಂಕ 29.04.2019ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ನಡೆದ ಪಟ್ಟಣ ಸಹಕಾರ ಬ್ಯಾಂಕುಗಳ ಸಭೆಯನ್ನು ನಡೆಸಲಾಯಿತು ಹಾಗೂ ಸೌಹಾರ್ದ ದಾವಾ ಪಂಚಾಯತಿ ನ್ಯಾಯಾಲಯದ ವ್ಯಾಜ್ಯಗಳ ವಿಲೇವಾರಿ ಹಾಗೂ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಯ ಕಾರ್ಯಯೋಜನೆಗಳ ಕುರಿತು ಸಮಲೋಚನೆಯನ್ನು ನಡೆಸಲಾಯಿತು. ಸದರಿ ಸಭೆಯಲ್ಲಿ 14 ಪಟ್ಟಣ ಸಹಕಾರ ಬ್ಯಾಂಕುಗಳು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ನಿರ್ದೇಶಕರುಗಳಾದ ಶ್ರೀ ವಿಶ್ವನಾಥ ಹಿರೇಮಠ, ಶ್ರೀ ತಿಮ್ಮಯ್ಯ ಶೆಟ್ಟಿ, ಹಾಗೂ ವ್ಯವಸ್ಥಾಪಕ ನಿರ್ದೇಶಕರುಗಳಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ NAFCUB ನ ನಿರ್ದೇಶಕರಾಗಿ ಆಯ್ಕೆಯಾದ ಶ್ರೀ ಕೆ. ಕಾಳಪ್ಪ, ನಿರ್ದೇಶಕರು, ಚೆನ್ನಬಸವಸ್ವಾಮಿ ಸೌಹಾರ್ದ ಪತ್ತಿನ ಸಹಕಾರ ಬ್ಯಾಂಕ್ ನಿ., ಗಂಗಾವತಿ ಇವರನ್ನು ಸನ್ಮಾನಿಸಲಾಯಿತು.

ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಅಧ್ಯಾದೇಶ - 2019 ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮ

ಬೆಂಗಳೂರು: ದಿನಾಂಕ 30.04.2019 ರಂದು ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ, ಹನುಮಂತ ನಗರ, ಬೆಂಗಳೂರು ಸಹಕಾರಿಯಲ್ಲಿ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ "ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಅಧ್ಯಾದೇಶ 2019" ಕುರಿತು ಉಪನ್ಯಾಸ ಹಾಗೂ ಚರ್ಚಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಿ.ಎಚ್ ಕೃಷ್ಣಾರೆಡ್ಡಿ ರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಬಿ.ವಿ ರವೀಂದ್ರನಾಥ್, ಸನ್ನದು ಲೆಕ್ಕ ಪರಿಶೋಧಕರು ಹಾಗೂ ಶ್ರೀ ಅನೂಪ್ ದೇಶಪಾಂಡೆ, ವಕೀಲರು, ಉಪನ್ಯಾಸ ನೀಡಿದರು ಹಾಗೂ ಬೆಂಗಳೂರು ಪ್ರಾಂತದ ವಿಭಾಗೀಯ ಅಧಿಕಾರಿಯಾದ ಶ್ರೀ ನಾರಾಯಣ ಹೆಗಡೆ ರವರು ಉಪಸ್ಥಿತರಿದ್ದರು, ಕಾರ್ಯಕ್ರಮದ ನಿರೂಪಣೆಯನ್ನು ಬೆಂಗಳೂರು ಪ್ರಾಂತದ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಮ್ ರವರು ನಡೆಸಿಕೊಟ್ಟರು, ಕಾರ್ಯಕ್ರಮದಲ್ಲಿ 114 ಸೌಹಾರ್ದ ಸಹಕಾರಿಗಳ ಸದಸ್ಯರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಹಕಾರಿಗಳು

ಕರ್ನಾಟಕ ಸೌಹಾರ್ದ ಕಾಯ್ದೆಗೆ ಪರಿವರ್ತನೆಗಾಗಿ ಆಡಳಿತ ಮಂಡಳಿ ನಿರ್ದೇಶಕರ ಸಭೆ

ಮಂಡ್ಯ: ಲೋಕಪಾವನಿ ಮಹಿಳಾ ಸಹಕಾರಿ ಬ್ಯಾಂಕ್ ಲಿ., ಮಂಡ್ಯ ಇದರ ಆಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ, ಕರ್ನಾಟಕ ಸೌಹಾರ್ದ ಕಾಯ್ದೆಗೆ ಪರಿವರ್ತನೆಗಾಗಿ ಸಹಕಾರಿಯ ನಿರ್ದೇಶಕರುಗಳಿಗೆ ಮಾಹಿತಿಯನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ, ಜಿಲ್ಲಾ ಸಂಯೋಜಕರಾದ ಶ್ರೀ ಎಂ. ಚಂದ್ರಶೇಖರಯ್ಯರವರು ಉಪಸ್ಥಿತರಿದ್ದರು.

ವೈ. ಕುಮಾರ್ ಸಂಯುಕ್ತ ಸಹಕಾರಿಯ ಸೇವೆಯಿಂದ ಬಿಡುಗಡೆ

ಬೆಂಗಳೂರು: ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ್ ಇವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿರುವುದರಿಂದ ಇವರನ್ನು ದಿನಾಂಕ 31.03.2019ರಂದು ಸೇವೆಯಿಂದ ಬಿಡುಗಡೆಗೊಳಿಸಲಾಗಿದೆ. ಸದರಿಯವರು ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾಗಿಯೂ ಸಹ ಕಾರ್ಯನಿರ್ವಹಿಸುತ್ತಿದ್ದರು. ಶ್ರೀ ವೈ.ಕುಮಾರ್ ಏಪ್ರಿಲ್ 01 2019ರಿಂದ ನಿರ್ವಹಿಸುವ ಯಾವುದೇ ಕಾರ್ಯಚಟುವಟಿಕೆಗಳು ಸಂಯುಕ್ತ ಸಹಕಾರಿಗೆ ಸಂಬಂಧಿಸಿರುವುದಿಲ್ಲ.

ಆರ್ಥಿಕ ತಃಖ್ತೆಗಳ ವಿಶ್ಲೇಷಣೆ, ಲೆಕ್ಕಪತ್ರಗಳ ಸಿದ್ಧತೆ ಹಾಗೂ ಲೆಕ್ಕಪರಿಶೋಧನೆ ವರದಿಗಳ ತರಬೇತಿ ಕಾರ್ಯಕ್ರಮ

ಚಾಮರಾಜನಗರ: ದಿನಾಂಕ: 25.04.2019 ರಂದು ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಲೆಕ್ಕಾಧಿಕಾರಿ ಸಿಬ್ಬಂದಿಗಳಿಗೆ ಆರ್ಥಿಕ ತಃಖ್ತೆಗಳ ವಿಶ್ಲೇಷಣೆ, ಲೆಕ್ಕಪತ್ರಗಳ ಸಿದ್ದತೆ – ಲೆಕ್ಕಪರಿಶೋಧನೆ ವರದಿ" ಉದ್ಘಾಟನಾ ಕಾರ್ಯಕ್ರಮದ ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಜಯಸಿಂಹ, ಅಧ್ಯಕ್ಷರು ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಚಾಮರಾಜನಗರ, ತರಬೇತಿದಾರರಾದ ಶ್ರೀಮತಿ ಶೋಭಾ. ಆರ್, ಸಹಪ್ರಧಾನ ವ್ಯವಸ್ಥಾಪಕರು, ಸಂಯಕ್ತ ಸಹಕಾರಿ, ಬೆಂಗಳೂರು, ಅಧ್ಯಕ್ಷತೆಯನ್ನು ಶ್ರೀ ನಾಗಸುಂದರ್, ಅಧ್ಯಕ್ಷರು, ಸಂಗಮ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ, ಇವರುಗಳ ಉಪಸ್ಥಿತಿಯಲ್ಲಿ ನಡೆಯಿತು.

ತರಬೇತಿಯ ಪ್ರಾರಂಭದಲ್ಲಿ ಪ್ರಾಸ್ತಾವಿಕವನ್ನು ಶ್ರೀ ಚಂದ್ರಶೇಖರಯ್ಯ ಎಂ ಇವರು ನಡೆಸಿಕೊಟ್ಟರು, ಸದರಿಯವರು ಮಾತನಾಡಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಪರಿಚಯ ಮಾಡುತ್ತಾ, ಇಡೀ ದೇಶದಲ್ಲಿಯೇ ತರಬೇತಿ ವಿಷಯದಲ್ಲಿ ಸಂಯುಕ್ತ ಸಹಕಾರಿಯು ಒಂದು ಮಾಡೆಲ್ ಸಂಸ್ಥೆಯಾಗಿ ಗುರುತಿಸಿಕೊಂಡಿದ್ದು, ವಿಶೇಷವಾಗಿ ಪ್ರಾಯೋಗಿಕ ವಿಷಯಗಳ ಕುರಿತು ತರಬೇತಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಸಹಕಾರಿಗಳ ಜೊತೆಯಲ್ಲಿ ಉತ್ತಮ ರೀತಿಯ ಸಂಬಂಧವನ್ನು ಹೊಂದಿರುತ್ತದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ಶ್ರೀ ಜಯಸಿಂಹರವರು ಮಾತನಾಡಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿಗಳು ಸಹಕಾರಿಗಳಿಗೆ ಅಗತ್ಯವಾದ ವಿಷಯಗಳನ್ನು ಗುರುತಿಸಿ ತರಬೇತಿ ಕಾರ್ಯಗಾರಗಳನ್ನು ನಡೆಸುತ್ತಿರುವುದು ಉತ್ತಮವಾದ ಕ್ರಮವಾಗಿದೆ ಎಂದು ತಿಳಿಸಿದರು. ಜಿಲ್ಲಾ ಸಂಯೋಜಕರು ಸಹಕಾರಿಗಳ ಆಡಳಿತ ಮಂಡಲಿ ಸಭೆಗಳಲ್ಲಿ ಭಾಗವಹಿಸಿ ಸಹಕಾರಿಗಳ ಅಭಿವೃದ್ಧಿ ಹಾಗೂ ಪ್ರಸ್ತುತ ವಿಷಯಗಳ ಕುರಿತು ಚರ್ಚಿಸಿ ನಿರ್ದೇಶಕರಿಗೆ ಜ್ಞಾನವನ್ನು ನೀಡುತ್ತಿರುತ್ತಾರೆ ಎಂದು ತಿಳಿಸಿ, ಸದರಿ ತರಬೇತಿಯನ್ನು ಆಯೋಜಿಸಿ ಸಹಕಾರಿ ಸಿಬ್ಬಂದಿಗಳಿಗೆ ಮಾರ್ಗದರ್ಶನ ನೀಡುತ್ತಿರುವುದಕ್ಕೆ ಸಂಯುಕ್ತ ಸಹಕಾರಿಗೆ ಅಭಿನಂದನೆಗಳನ್ನು ತಿಳಿಸಿದರು.

ತರಬೇತಿಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ನಾಗಸುಂದರ್ ರವರು ಮಾತನಾಡಿ ಜಿಲ್ಲೆಯಲ್ಲಿರುವ ಸಹಕಾರಿಗಳು ಸದರಿ ತರಬೇತಿಗಳ ಉಪಯೋಗವನ್ನು ಪಡೆದು ಉನ್ನತಿಯತ್ತ ಸಾಗಲಿ ಎಂದು ತಿಳಿಸಿ, ಚಾಮರಾಜನಗರದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸೌಹಾರ್ದ ಸಹಕಾರಿಗಳು ಬೆಳೆಯಲು ಎಲ್ಲಾ ಸಹಕಾರಿಗಳ ಉತ್ತೇಜಿಸಬೇಕಾಗಿ ಕೋರಿದರು.

ತರಬೇತಿಯನ್ನು ಶ್ರೀಮತಿ ಶೋಭಾ. ಆರ್ ರವರು ಪ್ರಾಯೋಗಿಕವಾಗಿ ಸಿಬ್ಬಂದಿಗಳೊಂದಿಗೆ ಸಂವಾದದ ಮೂಲಕ ನಡೆಸಿಕೊಟ್ಟರು. ಪ್ರಶ್ನೋತ್ತರ ಅವಧಿಯಲ್ಲಿ ಶ್ರೀ ಎಂ. ಚಂದ್ರಶೇಖರಯ್ಯ ಉಪಸ್ಥಿತರಿದ್ದರು. ಸದರಿ ತರಬೇತಿಯಲ್ಲಿ 11 ಸಹಕಾರಿಗಳಿಂದ 16 ಸಿಬ್ಬಂದಿಗಳು 05 ಸಹಕಾರಿಗಳ ಅಧ್ಯಕ್ಷರುಗಳು ಹಾಜರಿದ್ದರು.

ಸದರಿ ತರಬೇತಿಯನ್ನು ಕುಮಾರಿ ಜ್ಯೋತಿ ನಿರೂಪಿಸಿದರು, ಪ್ರಾರ್ಥನೆಯನ್ನು ಕುಮಾರಿ ಪೂಜಾ ಹಾಡಿದರು. ಸ್ವಾಗತವನ್ನು ಕುಮಾರಿ ರಮ್ಯ ನಡೆಸಿದರು. ವಂದನಾರ್ಪಣೆಯನ್ನು ಶ್ರೀ ಬಾಲಸುಬ್ರಮಣ್ಯ. ಎಸ್, ಅಧ್ಯಕ್ಷರು, ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಇವರು ನಡೆಸಿಕೊಟ್ಟರು.

ಅಭಿನಂದನೆ

ಬೆಂಗಳೂರು: 14ನೇ ಇಫ್ಕೋ ಪ್ರಾತಿನಿಧಿಕ ಆರ್‌ಜಿಬಿ ಸದಸ್ಯರಾಗಿ ಆಯ್ಕೆಯಾದ ಶ್ರೀ ವೈ.ಬಿ. ಪಾಟೀಲ್ ರವರನ್ನು ಸಂಯಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಸನ್ಮಾನಿಸಲಾಯಿತು.

ಬೆಂಗಳೂರು: **former cooperative spinning mills** 4ನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಆರ್.ಎನ್ ದೇಶಪಾಂಡೆ ರವರನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಸನ್ಮಾನಿಸಲಾಯಿತು.

ಸನ್ಮಾನ

ಬೆಂಗಳೂರು: ಶ್ರೀಮತಿ ಎಸ್. ಜಿ. ಸಂಧ್ಯಾ, ನೂತನ ಪೀಠಾಧಿಕಾರಿಗಳು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ, ಇವರನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಪರವಾಗಿ ಸನ್ಮಾನಿಸಲಾಯಿತು.

ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮ

ಬೆಂಗಳೂರು: ದಿನಾಂಕ 15.05.2019ರಂದು ಬೆಂಗಳೂರು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಬೆಂಗಳೂರಿನ ಜ್ಞಾನಭಾರತಿ ಆವರಣದಲ್ಲಿ ಪ್ರೋ ವೆಂಕಟಗಿರಿಗೌಡ ಸಭಾಂಗಣದಲ್ಲಿ ಯುವಕರಿಗಾಗಿ ಸಹಕಾರ ಕುರಿತಂತೆ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿ ಹಾಗೂ ಪದವಿ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಹಕಾರ ಕ್ಷೇತ್ರದ ತಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳಲು ಕೋರಿದೆ.

ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ತರಬೇತಿ – ಜುಲೈ 01 ರಿಂದ 07ರವರೆಗೆ

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬ್ಯಾಂಕುಗಳ ನೂತನ ಸಿಬ್ಬಂದಿಯವರಿಗಾಗಿ 7 ದಿನಗಳ "ಬೇಸಿಕ್ ಬ್ಯಾಂಕಿಂಗ್ ಕೋರ್ಸ್" ಅನ್ನು ಬೆಂಗಳೂರಿನ ಪದ್ಮನಾಭನಗರದಲ್ಲಿರುವ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯಲ್ಲಿ ದಿನಾಂಕ 01 ರಿಂದ 07 ಜುಲೈ 2019ರವರೆಗೆ ಆಯೋಜಿಸಲಾಗಿದೆ. ನೂತನವಾಗಿ ನೇಮಕವಾಗಿರುವ ಸಿಬ್ಬಂದಿಯವರು ಅಥವಾ ಈಗಾಗಲೇ ನೇಮಕವಾಗಿ ತರಬೇತಿ ಹೊಂದಿರದ ಸಿಬ್ಬಂದಿಯವರು ಈ ತರಬೇತಿಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. ಒಂದು ಸೌಹಾರ್ದ ಸಹಕಾರಿ ಬ್ಯಾಂಕಿನಿಂದ ಕನಿಷ್ಠ 2, ಗರಿಷ್ಠ 5 ಸಿಬ್ಬಂದಿಯವರು ಭಾಗವಹಿಸಬಹುದು. ತರಬೇತಿ ಶುಲ್ಕ ಪ್ರತಿ ಶಿಬಿರಾರ್ಥಿಗೆ ರೂ.3500/–ಗಳನ್ನು (ವಸತಿ, ಊಟ–ಉಪಹಾರಗಳ ವೆಚ್ಚಕ್ಕಾಗಿ) ಹಾಗೂ ತರಬೇತಿ ಸ್ಥಳಕ್ಕೆ ಬಂದು ಹೋಗುವ ವೆಚ್ಚಗಳನ್ನು ಸೌಹಾರ್ದ ಸಹಕಾರಿ ಬ್ಯಾಂಕಿನವರು ಭರಿಸಬೇಕಾಗುತ್ತದೆ. ಅಧ್ಯಯನ ಸಾಹಿತ್ಯ, ತಜ್ಞರಿಂದ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ವ್ಯವಸ್ಥೆಗಳನ್ನು, ವಿವಿಧ ಸಹಕಾರಿಗಳ ಅಧ್ಯಯನ ವ್ಯವಸ್ಥೆಯನ್ನು ಸಂಯುಕ್ತ ಸಹಕಾರಿಯಿಂದ ಮಾಡುತ್ತದೆ. ಶಿಬಿರಾರ್ಥಿಗಳು ವಿವರಗಳೊಂದಿಗೆ ಅರ್ಜಿ ಭರ್ತಿ ಮಾಡಿ ಸಂಯುಕ್ತ ಸಹಕಾರಿಗೆ ದಿನಾಂಕ 22.06.2019ರ ಒಳಗಾಗಿ ಕಳುಹಿಸಲು ಕೋರಿದೆ. ಶಿಬಿರಾರ್ಥಿಗಳು ಭರ್ತಿ ಮಾಡಿ ಕಳುಹಿಸಬೇಕಿರುವ ಅರ್ಜಿ ನಮೂನೆಯು ಸಂಯುಕ್ತ ಸಹಕಾರಿಯ ವೆಬ್‌ಸೈಟ್ **www.souharda.coop** ನಲ್ಲಿ ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಶಿಕ್ಷಣ ವಿಭಾಗದ ತರಬೇತಿ ಅಧಿಕಾರಿಯಾದ ಶ್ರೀ ಕಾರಕೂನ್ ಮೊ: 8884466710 ಇವರನ್ನು ಸಂಪರ್ಕಿಸಬಹುದು.

ಡಿಸಿಬಿಎಂ – 3ನೇ ಕಂಟ್ಯಾಕ್ಟ ಕ್ಲಾಸ್ ಹಾಗೂ ಅಂತಿಮ ಪರೀಕ್ಷಾ ದಿನಗಳು

ಸಂಯುಕ್ತ ಸಹಕಾರಿಯು ಇದೇ ಜನವರಿ 1 2019ರಂದು ಪ್ರಾರಂಭಿಸಿರುವ ಡಿಸಿಬಿಎಂ ದೂರ ಶಿಕ್ಷಣ ತರಬೇತಿಯ 3ನೇ ಕಂಟ್ಯಾಕ್ಟ ಕಾರ್ಯಕ್ರಮವು ದಿನಾಂಕ 8 & 9 ಜೂನ್ 2019 ರಂದು ಆರ್.ಐ.ಸಿ.ಎಂ ಬೆಂಗಳೂರು ಹಾಗೂ ಬೆಲ್ಲದ ಬಾಗೇವಾಡಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್, ಬೆಲ್ಲದ ಬಾಗೇವಾಡಿ ಬೆಳಗಾವಿ ಜಿಲ್ಲೆಯ ಎರಡು ಸ್ಥಳಗಳಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 5.00ರ ವರೆಗೆ ನಡೆಯಲಿದೆ ಎಲ್ಲ ಅಭ್ಯರ್ಥಿಗಳು ಭಾಗವಹಿಸಲು ಸೂಚಿಸಿದೆ. ಹಾಗೂ ಡಿಸಿಬಿಎಂ ಅಂತಿಮ ಪರೀಕ್ಷೆ ದಿನಾಂಕ 21, 22 & 23 ಜೂನ್ 2019 ರಂದು ನಡೆಯಲಿದೆ.

ಶಾಖೆ ಉದ್ಘಾಟನಾ ಕಾರ್ಯಕ್ರಮ

ಕಾರವಾರ: ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿಯಮಿತ, ಹೊನ್ನಾವರ ಇದರ 9ನೇ ಶಾಖೆಯು ದಿನಾಂಕ 23.02.2019ರಂದು ಅಂಕೋಲಾದಲ್ಲಿ ಮತು 10ನೇ ಶಾಖೆಯು ದಿನಾಂಕ 03.03.2019ರಂದು ಸಿದ್ದಾಪುರದಲ್ಲಿ ಲಕ್ಷ್ಮಿ ಪೂಜೆಯೊಂದಿಗೆ ವಿದ್ಯುಕ್ತವಾಗಿ ಪ್ರಾರಂಭವಾಯಿತು. ಇದರ ಅಧ್ಯಕ್ಷರಾದ ಶ್ರೀ ಜಿ.ಜಿ.ಶಂಕರರವರು ಮಾತನಾಡಿ ಜಿಲ್ಲೆಯಾದ್ಯಂತ ನಮ್ಮ 8 ಶಾಖೆಗಳು ಕಾರ್ಯನಿರ್ವಹಿಸುತ್ತಿದ್ದು ಇದೀಗ ಅಂಕೋಲಾದಲ್ಲಿ 9 ಹಾಗೂ ಸಿದ್ದಾಪುರದಲ್ಲಿ 10ನೇ ಶಾಖೆ ಕಾರ್ಯಾರಂಭಿಸಿದೆ. ಹೀಗೆ ಜಿಲ್ಲೆಯಲ್ಲಿ ಅತಿ ಹೆಚ್ಚು ಶಾಖೆ ಹೊಂದಿದ ಎರಡನೇ ಸಹಕಾರಿಯಾಗಿದೆ ಎಂದರು. ಸದಸ್ಯ ಗ್ರಾಹಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಹಕಾರಿ ಉತ್ತಮ ಸೇವೆಯನ್ನು ಜಿಲ್ಲಾದ್ಯಂತ ನೀಡುವದರೊಂದಿಗೆ ಜನಮಾನಸವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ವೆಂಕಟ್ರಮಣ ಕಿಮಾನಿಕರ್, ನಿರ್ದೇಶಕರಾದ ಜಿ.ಎಸ್.ಭಟ್, ಜಿ.ಆರ್.ಹೆಗಡೆ, ನಾಗರಾಜ ಇಂದ್ರ, ಎಸ್.ಜಿ.ಭಟ್, ಪಾತ್ರೋನ್ ಫರ್ನಾಂಡಿಸ್, ಲಿಫರ್ಡ ರೊಡ್ರಿಗ್ಸ್, ಎಲ್. ಜೆ. ಪಟಗಾರ, ರಾಜೇಶ ದೇಸಾಯಿ, ಗುಣಮಾಲ ಇಂದ್ರ, ಮಾರುತಿ ಗೌಡ ಬಿಡಿಸಿ ನಿರ್ದೇಶಕರಾದ ಎನ್. ಟಿ. ಪಟಗಾರ, ಜಿ. ಪಿ. ಹೆಗಡೆ, ಮಾಂತೇಶ ಹಾದಿಮನಿ, ಜಿ. ಎಲ್. ಗೌಡ, ಮಾಣೇಶ್ವರ ಹರಿಕಾಂತ, ಶಶಿಕಾಂತ ಪವಾರ, ರಾಷ್ಟ್ರಪ್ರಶಸ್ತಿ ವಿಜೇತ ನಿವೃತ್ತ ಶಿಕ್ಷಕ ಎಸ್. ಎಸ್. ಭಟ್ಟ, ಆಂತರಿಕ ಲೆಕ್ಕಪರಿಶೋಧಕ ಎಸ್. ಎನ್. ಭಟ್ಟ, ಜನರಲ್ ಮೆನೇಜರ್ ಮಹೇಶ ಶೆಟ್ಟಿ, ಎ.ಜಿ.ಎಂ ಎಡ್ವಿನ್ ರೆಬೆಲ್ಲೊ, ಡೆವಲಪ್‌ಮೆಂಟ್ ಆಫೀಸರ್ ಶ್ರೀಪಾದ ಭಟ್ಟ, ಅಂಕೋಲಾ ಹಾಗೂ ಸಿದ್ದಾಪುರ ಶಾಖಾ ವ್ಯವಸ್ಥಾಪಕ ದಾಮೋದರ ಆಚಾರಿ ಮತ್ತು ನಿಲೇಶ ಮೇಸ್ತ, ಕಟ್ಟಡ ಮಾಲಿಕರಾದ ಪುಂಡ್ಲಿಕ್ ಕಾಮತ್ ಮತ್ತು ಕೇಶವ ಶಾನಭಾಗ ಅವರ ಕುಟುಂಬ, ಎಲ್ಲಾ ಶಾಖಾ ವ್ಯವಸ್ಥಾಪಕರು, ಸಿಬ್ಬಂದಿಗಳು ಹಾಗೂ ಫೀಲ್ಡ್ ಎಕ್ಸಿಕ್ಯೂಟಿವ್‌ಗಳು ಉಪಸ್ಥಿತರಿದ್ದರು.

ಮೊಬೈಲ್ ಅಪ್ಲಿಕೇಶನ್ ಬಿಡುಗಡೆ ಸಮಾರಂಭ

ಬೆಂಗಳೂರು: ದಿನಾಂಕ 12.04.2019ರಂದು ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಸದರಿ ಸಹಕಾರಿಯಲ್ಲಿ ನಗದು ರಹಿತ ಉತ್ತೇಜನ ವರ್ಷದ ಪ್ರಯುಕ್ತ ಸಹಕಾರಿಯಲ್ಲಿ ಮೊಬೈಲ್ ಅಪ್ಲಿಕೇಶನ್ ಬಿಡುಗಡೆ ಸಮಾರಂಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ. ಮುನಿರೆಡ್ಡಿರವರು, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಸಹಕಾರಿಯ ನಿರ್ದೇಶಕರು, ಸಹಕಾರಿಯ ಸದಸ್ಯರು ಹಾಗೂ ಸಹಕಾರಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಮತದಾನ ಜಾಗೃತಿ ಅಭಿಯಾನ

ಕೊಪ್ಪಳ: ಶ್ರೀ ಗುರು ಸೃಷ್ಟಿಕರ್ತ ಪತ್ತಿನ ಸೌಹಾರ್ದ ಸಹಕಾರ ನಿಯಮಿತ ಗಿಣಿಗೇರ ಸಹಕಾರಿಯಿಂದ ಪ್ರಜಾಪ್ರಭುತ್ವದ ನೆಲೆಗಟ್ಟಿನಲ್ಲಿ ಭದ್ರವಾದ ಸರ್ಕಾರ ನೀಡುವ ನಿಟ್ಟಿನಲ್ಲಿ ಮತದಾನ ಮಾಡಬೇಕಾಗಿದೆ. ಹಣ, ಹೆಂಡ ಅಮಿಷಕ್ಕೆ ಒಳಾಗಾಗದೆ ಪ್ರಜಾಪ್ರಭುತ್ವದ ಮಹತ್ವ ಅರಿತು ಗ್ರಾಹಕರು ಮತದಾನ ಮಾಡಿ ಎಂದು ಸಹಕಾರಿಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಏಣಿಗಿ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಸಹಕಾರಿಯ ಸಿಬ್ಬಂದಿ ವರ್ಗ ಹಾಗೂ ಪಿಗ್ಮಿ ಸಂಗ್ರಹಕರು ಹಾಗೂ ಗ್ರಾಹಕರು ಉಪಸ್ಥಿತರಿದ್ದರು

ಉದ್ಘಾಟನಾ ಕಾರ್ಯಕ್ರಮ

ಹಾವೇರಿ: ಶ್ರೀ ಬಾಲಕೃಷ್ಣ ಪತ್ತಿನ ಸೌಹಾರ್ದ ಸಹಕಾರಿ ನಿ., ಹಾವೇರಿ ಸದರಿ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಾರುತಿ ಬಿ. ಕಲಾಲ ರವರು ಉಪಸ್ಥಿತರಿದ್ದರು.

ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

ಶ್ರೀ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ

ಶ್ರೀ ನಿಜಗುಣೆಪ್ಪ ಎಸ್. ಶೆಟ್ಟರ
ಅಧ್ಯಕ್ಷರು

ಶ್ರೀ ಅನಿಲಕುಮಾರ ವಿ. ನಾಲ್ವಾಡ
ಉಪಾಧ್ಯಕ್ಷರು

ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ ಉದ್ಘಾಟನಾ ಕಾರ್ಯಕ್ರಮ

ಕೊಪ್ಪಳ: ಗಂಗಾ ಕಾವೇರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಇರಕಲ್ಲಗಡ, ಕೊಪ್ಪಳ ಸಹಕಾರಿಯು ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಶುದ್ಧ ಕುಡಿಯುವ ನೀರಿನ ಅರವಟ್ಟಗೆಯನ್ನು ಪ್ರಾರಂಭಿಸಲಾಯಿತು. ಸದರಿ ಸಹಕಾರಿಯು 2015 ನೇ ಸಾಲಿನಿಂದಲೂ ಬೇಸಿಗೆ ಕಾಲದಲ್ಲಿ ಈ ಎರಡು ತಿಂಗಳುಗಳಲ್ಲಿ "ಶುದ್ಧಕುಡಿಯುವ ನೀರಿನ ಅರವಟ್ಟಗೆಯನ್ನು" ನಿರಂತರವಾಗಿ ಪ್ರಾರಂಭಿಸುತ್ತಾ ಬಂದಿದೆ. ಈ ಸೇವೆಯು ನಿರಂತರವಾಗಿ ನಡೆಯಲು ಸಹಕಾರಿಯ ಆಡಳಿತ ಮಂಡಳಿ ನಿರ್ದೇಶರು, ಸಿಬ್ಬಂದಿಗಳು ಮತ್ತು ಪಿಗ್ಮಿ ಏಜೆಂಟರ ಪ್ರಮುಖ ಪಾತ್ರ ವಹಿಸಿದ್ದಾರೆ.

ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಬೆಳಗಾವಿ

ಆರ್ಥಿಕ ಅಂಶಗಳು	30.03.2019 ಕ್ಕೆ ಇದ್ದಂತೆ (ಕೋಟಿಗಳಲ್ಲಿ)
ಸದಸ್ಯರ ಸಂಖ್ಯೆ	7,994 ಸದಸ್ಯರು
ವಸೂಲಾದ ಶೇರು ಬಂಡವಾಳ	62,80,000
ಕಾಯ್ದಿಟ್ಟ ನಿಧಿ & ಇತರ ನಿಧಿಗಳು	8,49,47,710
ಠೇವುಗಳು	113,06,69,652
ಗುಂತಾವಣೆಗಳು	43,54,63,968
ಸಾಲಗಳು	76,27,92,024
ದುಡಿಯುವ ಬಂಡವಾಳ	122,21,39,715
ಒಟ್ಟು ವಹಿವಾಟು	671,06,21,905
ನಿವ್ವಳ ಲಾಭ	2,31,32,581
ಲಾಭಾಂಶ ನೀಡಿದ್ದು	25%
ಶಾಖೆಗಳು	1+6=7
ಸಾಲ ವಸೂಲಾತಿ	99.47%

ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

ದಾವಾ ದಾಖಲಾತಿಗಳು : ಬೆಳಗಾವಿ ವಿಭಾಗದಿಂದ 5,320 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 3125 ಪ್ರಕರಣಗಳು ಸೇರಿದಂತೆ ಒಟ್ಟು 8445 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 4,217 ಪ್ರಕರಣಗಳು ಇತ್ಯರ್ಥಗೊಂಡಿವೆ.

ಅಮಲ್ಜಾರಿ ಪ್ರಕರಣಗಳು : ಒಟ್ಟು 1,369 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 186 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 141 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 1042 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 954 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 80 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 77 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 797 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

ಇಫ್ಕೋ ಸಂಸ್ಥೆಯ ರಸಗೊಬ್ಬರ ಮಾರಾಟ ಮಾಡಲು ಆಸಕ್ತರಿರುವ ಸೌಹಾರ್ದ ಸಹಕಾರಿಗಳು ಈ ಕೆಳಕಂಡ ವಿವಿರದಲ್ಲಿನ ಇಫ್ಕೋ ಸಂಸ್ಥೆಯ ಜಿಲ್ಲಾ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಹೆಸರು	ಕೇಂದ್ರ ಸ್ಥಾನ	ಜಿಲ್ಲೆಗಳು	ಮೊಬೈಲ್ ನಂ
ಕೃಪಾಶಂಕರ್ ಎಂ.ಎಲ್ ಉಪಮಾರಾಟ ವ್ಯವಸ್ಥಾಪಕರು	ಬೆಂಗಳೂರು	ಕರ್ನಾಟಕ ರಾಜ್ಯ	9448090417
ಡಾ.ಸಿ. ನಾರಾಯಣಸ್ವಾಮಿ, ಡಿಎಫ್ಎಮ್, ಕ್ಷೇತ್ರೀಯ ವ್ಯವಸ್ಥಾಪಕರು, ಹಾಸನ ಕ್ಷೇತ್ರ	ಹಾಸನ	ಹಾಸನ, ಚಿಕ್ಕಮಂಗಳೂರು	9448090431
ಆರ್ ಲಕ್ಷ್ಮೀಶ	ಚಿತ್ರದುರ್ಗ	ಚಿತ್ರದುರ್ಗ, ತುಮಕೂರು	9448090433
ನವೀನ ಎಸ್. ಪಾಟೀಲ್	ಶಿವಮೊಗ್ಗ	ಶಿವಮೊಗ್ಗ	9448090421
ಸಂಗಮೇಶ ಎಮ್. ಬಿರಾದಾರ್	ಮಂಗಳೂರು	ದಕ್ಷಿಣ ಕನ್ನಡ, ಉಡುಪಿ	8296882143
ಅಥಾಉಲ್ಲಾ ಪಿ.	ಕಲಬುರಗಿ	ಕಲಬುರಗಿ	7349464411
ವಿಷ್ಣುತೀರ್ಥ ಕಲ್ಲೂರ್‌ಕರ್	ಯಾದಗಿರಿ	ಯಾದಗಿರಿ	9945144721
ಸಿದ್ದಾರೋಡ	ಹೊಸಪೇಟೆ	ಬಳ್ಳಾರಿ	9448090413
ಚಿದಂಬರ ಮೂರ್ತಿ	ಕೊಪ್ಪಳ	ಕೊಪ್ಪಳ, ಬೀದರ	9448090427
ಜಿ. ಗೋವಿಂದರಾಜ	ರಾಯಚೂರು	ಬೀದರ, ರಾಯಚೂರು	9448090430
ಬಿ. ಚೇತನ	ಬೆಳಗಾವಿ	ಬೆಳಗಾವಿ	9448090416
ಬಿ.ಎಲ್. ರಾಜು	ಬಿಜಾಪುರ	ಬಾಗಲಕೋಟೆ, ಬಿಜಾಪುರ	9448090424
ಎಸ್. ರಾಜೇಂದ್ರ ಪ್ರಸಾದ	ದಾವಣಗೆರೆ	ದಾವಣಗೆರೆ	9448090401
ಗಣೇಶ ಎಸ್. ಎನ್.	ಹುಬ್ಬಳ್ಳಿ	ಧಾರವಾಡ, ಗದಗ, ಉತ್ತರ ಕನ್ನಡ	9448090423
ಎಚ್. ಎಮ್. ಸತೀಶ್ ಕುಮಾರ್	ಬೆಂಗಳೂರು	ಬೆಂಗಳೂರು ಗ್ರಾಮಂತರ, ಬೆಂಗಳೂರು ಜಿಲ್ಲೆ, ಕೋಲಾರ, ಚಿಕ್ಕಬಳ್ಳಾಪುರ	9448090426
ಎಸ್, ಎನ್. ಹಾದಿಮನಿ	ಚಾಮರಾಜನಗರ	ಚಾಮರಾಜನಗರ	9448792402
ಎಂ.ಕೆ. ಸುಬ್ರಮಣ್ಯ ಪ್ರಸಾದ	ಮಂಡ್ಯ	ಮಂಡ್ಯ, ರಾಮನಗರ	9448090403
ಪಿ.ಕೆ. ರಫೀಕ್	ಮೈಸೂರು	ಮೈಸೂರು, ಕೊಡಗು	9148794054
ನಾಗರಾಜ್ ಕರಿಗಾರ	ಹಾವೇರಿ	ಹಾವೇರಿ	8296883143

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ. – ಸಂಪಾದಕರು

ಪ್ರಶ್ನೆ : ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿನ ಒಂದು ಸಹಕಾರ ಸಂಘವು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮದಡಿಯಲ್ಲಿ ಪರಿವರ್ತನೆಗೊಂಡು ಸೌಹಾರ್ದ ಸಹಕಾರಿಯಾಗಿ ನೊಂದಣಿಯಾದ ನಂತರ ಹೊಸದಾಗಿ ಚುನಾವಣೆ ನಡೆಸಬೇಕೆ ಅಥವಾ ಸಹಕಾರ ಸಂಘದ ಚುನಾಯಿತ ಆಡಳಿತ ಮಂಡಳಿಯೇ ತನ್ನ ಅವಧಿ ಪೂರ್ಣಗೊಳ್ಳುವವರೆಗೆ ಕಾರ್ಯ ನಿರ್ವಹಿಸಬಹುದೆ?

ಈ ಪ್ರಶ್ನೆಗೆ ಉತ್ತರಿಸುವ ಮೊದಲು ವಿವಿಧ ಕಾಲಘಟ್ಟದಲ್ಲಿ ಜಾರಿಯಲ್ಲಿದ್ದ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮಗಳಲ್ಲಿ ಮಂಡಳಿಯ ಚುನಾವಣೆಗೆ ಸಂಬಂಧಿಸಿದ ಕಲಂ 26ರ ಅಂಶಗಳನ್ನು ಅವಲೋಕಿಸೋಣ

2002ರ ಮೂಲ ಕಾಯ್ದೆ :

2002ರಲ್ಲಿ ಮೊದಲು ಕಾಯ್ದೆ ರೂಪುಗೊಂಡಾಗ ಸಹಕಾರ ಸಂಘಗಳು ಪರಿವರ್ತನೆಗೊಂಡರೆ ಅಂತಹ ಸೌಹಾರ್ದಗಳ ಆಡಳಿತ ಮಂಡಳಿಗೆ ಹೊಸದಾಗಿ ಚುನಾವಣೆ ಮಾಡುವ ಬಗ್ಗೆ ಯಾವುದೇ ಅಂಶಗಳಿರಲಿಲ್ಲ. ಅಂದರೆ ಅಂತಹ ಪರಿವರ್ತಿತ ಸೌಹಾರ್ದ ಸಹಕಾರಿಗಳಿಗೆ ಹೊಸದಾಗಿ ಚುನಾವಣೆ ಬೇಕಿರುವುದಿಲ್ಲ ಎಂದೇ ವ್ಯಾಖ್ಯಾನಿಸಲಾಗುತ್ತಿತ್ತು. ಅಂತೆಯೇ ನೋಂದಣಾಧಿಕಾರಿಗಳೂ ಪರಿವರ್ತನಾ ಆದೇಶ ನೀಡುವಾಗ ಹೊಸದಾಗಿ ಚುನಾವಣೆ ನಡೆಸಬೇಕೆಂಬ ಶರತ್ತನ್ನು ವಿಧಿಸುತ್ತಿರಲಿಲ್ಲ.

2004ರ ತಿದ್ದುಪಡಿ ಕಾಯ್ದೆ :

ನಂತರ 2004ರಲ್ಲಿ 31ಮಾರ್ಚ್ 2004ರಿಂದ ಜಾರಿಗೆ ಬಂದ 21ನೇ ತಿದ್ದುಪಡಿಯಲ್ಲಿ ಕೆಳಕಂಡ ಪರಂತುಕವನ್ನು ಸೇರಿಸಲಾಯಿತು

ಪರಂತು, ಸಹಕಾರಿಯಾಗಿ ಸಹಕಾರ ಸಂಘವೊಂದು ಪರಿವರ್ತನೆಯಾಗಿ ನೊಂದಣಿಯಾದ ತರುವಾಯ ಅದರ ಪ್ರಥಮ ಸಾಮಾನ್ಯ ಸಭೆಯನ್ನು, ಮಂಡಳಿಯನ್ನು ಚುನಾಯಿಸಲು, ಅದು ನೋಂದಣಿಯಾದ ದಿನಾಂಕದಿಂದ ಅರವತ್ತು ದಿನಗಳೊಳಗೆ ನಡೆಸತಕ್ಕದ್ದು ಮತ್ತು ಮುಖ್ಯ ಕಾರ್ಯನಿರ್ವಾಹಕನು ಅಂಥ ಸಭೆಯನ್ನು ನಡೆಸಲು ವ್ಯವಸ್ಥೆ ಮಾಡತಕ್ಕದ್ದು.

31 ಮಾರ್ಚ್ 2004ರ ನಂತರ ಪರಿವರ್ತನೆಗೊಂಡ ಸಹಕಾರಿಗಳಿಗೆ ನೋಂದಣಾಧಿಕಾರಿಗಳು ಪರಿವರ್ತನೆಯಾದ ಅರವತ್ತು ದಿನಗಳೊಳಗಾಗಿ ಪರಿವರ್ತಿತ ಸಹಕಾರಿಯ ಆಡಳಿತ ಮಂಡಳಿಯ ಚುನಾವಣೆ ನಡೆಸಬೇಕೆಂಬ ಷರತ್ತನ್ನು ವಿಧಿಸಿ ಆದೇಶ ನೀಡಲಾರಂಭಿಸಿದರು.

2013ರ ತಿದ್ದುಪಡಿ ಕಾಯ್ದೆ :

ನಂತರ 2013ರಲ್ಲಿ 11 ಫೆಬ್ರವರಿ 2013ರಿಂದ ಜಾರಿಗೆ ಬಂದ ತಿದ್ದುಪಡಿಯಲ್ಲಿ ಈ ಪರಂತ್ತನ್ನು ಕೈಬಿಡಲಾಯಿತು

ಅಂದರೆ 11 ಫೆಬ್ರವರಿ 2013ರ ನಂತರ ಪರಿವರ್ತನೆಗೊಂಡ ಸಹಕಾರಿಗಳಿಗೆ ಪರಿವರ್ತನೆಯಾದ ನಂತರ ಪರಿವರ್ತಿತ ಸಹಕಾರಿಯ ಆಡಳಿತ ಮಂಡಳಿಯ ಚುನಾವಣೆ ಹೊಸದಾಗಿ ನಡೆಸಬೇಕಾಗಿರುವುದಿಲ್ಲ ಎಂಬ ಅಂಶವನ್ನು ನಾವು ಮನಗಾಣಬಹುದಾಗಿರುತ್ತದೆ

ನಂತರದಲ್ಲಿ ಜಾರಿಗೆ ಬಂದ ತಿದ್ದುಪಡಿಗಳಲ್ಲಿಯೂ ಈ ಕುರಿತು ಯಾವುದೇ ಬದಲಾವಣೆ ಮಾಡಿರುವುದಿಲ್ಲ.

ಮೇಲೆ ಚರ್ಚಿಸಿದ ಎಲ್ಲ ಅಂಶಗಳನ್ನು ಕೂಲಂಕಷವಾಗಿ ಗಮನಿಸಿದರೆ ಪ್ರಸ್ತುತ ಯಾವುದೇ ಸಹಕಾರ ಸಂಘವು ಸೌಹಾರ್ದ ಸಹಕಾರಿಯಾಗಿ ಪರಿವರ್ತನೆಗೊಂಡಲ್ಲಿ ಪರಿವರ್ತನೆಯ ಪೂರ್ವದಲ್ಲಿರುವ ಆಡಳಿತ ಮಂಡಳಿಯೇ ತನ್ನ ಅವಧಿಯನ್ನು ಪೂರ್ಣಗೊಳಿಸುವವರೆಗೆ ಮುಂದುವರೆಯಬಹುದಾಗಿರುತ್ತದೆ.

– ಸಿಎ ‖ ಬಿ.ವಿ.ರವೀಂದ್ರನಾಥ್, ಸಾಗರ

ಕಾರ್ಮಿಕ ದಿನಾಚರಣೆ ಆಚರಣೆ

ಹಾವೇರಿ: ದಿನಾಂಕ 01.05.2019ರಂದು ಶ್ರೀ ಪುಟ್ಟರಾಜಗವಾಯಿ ಸಚೇತನ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹಾವೇರಿ ಸಹಕಾರಿಯಲ್ಲಿ ಕಾರ್ಮಿಕ ದಿನಾಚರಣೆಯನ್ನು ಆಚರಣೆ ಮಾಡಲಾಯಿತು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಹನುಮಂತಪ್ಪ. ಯು. ವಿ ಅವರು ವಹಿಸಿದ್ದರು ಮುಖ್ಯ ಅತಿಥಿಯಾಗಿ ಸಹಕಾರಿಯ ನಿರ್ದೇಶಕರು ಹಾಗೂ ಸಿಬ್ಬಂದಿ ಕುಮಾರಿ ನಂದಾ. ಎಸ್. ಹರವಿ ರವರು ಉಪಸ್ಥಿತರಿದ್ದರು. ಕಾರ್ಯಕ್ರಮ ನಿರೂಪಣೆಯನ್ನು ಕುಮಾರಿ ಲಕ್ಷ್ಮೀ.ಎಸ್.ಹೊಸಮನಿ, ವ್ಯವಸ್ಥಾಪಕರು, ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಕುಮಾರಿ ಸುನಿತಾ. ಎಸ್. ಕೋರಿಶೆಟ್ಟರ ರವರು ನೇರವೇರಿಸಿದರು.

ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ

ವರ್ಷಾಂತ್ಯದ ಆರ್ಥಿಕ ಮಾಹಿತಿ ಸಲ್ಲಿಕೆ : ಸಂಯುಕ್ತ ಸಹಕಾರಿಯು ಕಳುಹಿಸುವ ವರ್ಷಾಂತ್ಯದ ಆರ್ಥಿಕ ಮಾಹಿತಿ ನಮೂನೆಯನ್ನು ಕೂಡಲೇ ಭರ್ತಿ ಮಾಡಿ ಆದಷ್ಟು ಶೀಘ್ರವಾಗಿ ಸಂಯುಕ್ತ ಸಹಕಾರಿಯ ಆಯಾ ಭಾಗದ ಪ್ರಾಂತೀಯ ಕಛೇರಿಗಳಿಗೆ ಕಳುಹಿಸಲು ತಿಳಿಸಲಾಗಿದೆ.

ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಸುಗ್ರೀವಾಜ್ಞೆ – 2019

– ಅನೂಪ ದೇಶಪಾಂಡೆ, ವಕೀಲರು, ಧಾರವಾಡ.

ಹಿನ್ನೆಲೆ:

ದೇಶಾದ್ಯಂತ ಸಾರ್ವಜನಿಕರಿಂದ ಅಪಾರ ಮೊತ್ತದ ಠೇವಣಿ ಪಡೆದು ಜನರಿಗೆ ವಂಚನೆ ಮಾಡಿ ಕಣ್ಮರೆಯಾಗುತ್ತಿರುವ ಸಂಸ್ಥೆಗಳ ಸಂಖ್ಯೆ ಹೆಚ್ಚುತ್ತಿರುವುದನ್ನು ಕೇಂದ್ರ ಸರಕಾರ ಗಂಭೀರವಾಗಿ ಪರಿಗಣಿಸಿದೆ. ಇಂತಹ ಸಂದರ್ಭದಲ್ಲಿ ಠೇವಣಿದಾರರ ಹಿತ ರಕ್ಷಣೆಗೆ ಸೂಕ್ತ ಕಾಯ್ದೆ ವ್ಯವಸ್ಥೆ ಇಲ್ಲದಿರುವುದರ ಕಾರಣವನ್ನು ಸರಕಾರ ಗಮನಿಸಿದೆ. ವಂಚಕ ವ್ಯಕ್ತಿಗಳು ಮತ್ತು ಸಂಸ್ಥೆಗಳು ಪ್ರಸ್ತುತ ಕಾನೂನುಗಳಲ್ಲಿನ ಲೋಪ ದೋಷಗಳ ದುರ್ಲಾಭ ಪಡೆಯುತ್ತಿರುವುದನ್ನು ಹಾಗೂ ಬೇರೆ ಬೇರೆ ನಿಯಂತ್ರಕ ಸಂಸ್ಥೆಗಳ ನಡುವಿನ ಸಾಮರಸ್ಯದ ಕೊರತೆ, ಬೇರೆ ಬೇರೆ ರಾಜ್ಯಗಳ ನಡುವಿನ ಸಾಮರಸ್ಯದ ಕೊರತೆಗಳು ವಂಚಕರು ಸುಲಭವಾಗಿ ಕಾನೂನಿನ ಹಿಡಿತಕ್ಕೆ ಸಿಗದೇ ಇರುವುದು ಮತ್ತು ವಂಚನೆಗೊಳಗಾದ ಜನರಿಗೆ ಸೂಕ್ತ ನ್ಯಾಯ ಸಿಗದಿರುವುದನ್ನು ಕೇಂದ್ರ ಸರಕಾರ ಗಂಭೀರವಾಗಿ ಪರಿಗಣಿಸಿದೆ. ಸಿಬಿಐ ಸಂಗ್ರಹಿಸಿ ಮಾಹಿತಿಯಂತೆ ಅಂದಾಜು 6 ಕೋಟಿಗೂ ಹೆಚ್ಚು ಠೇವಣಿದಾರರಿಂದ ರೂ. 68 ಸಾವಿರ ಕೋಟಿಯಷ್ಟು ಹಣವನ್ನು ಈ ರೀತಿ ಅನಿಯಂತ್ರಿತ ಠೇವಣಿಗಳ ರೂಪದಲ್ಲಿ ಸಂಗ್ರಹಿಸಲಾಗಿದೆ. ಈ ಕಾರಣದಿಂದ ಕೇಂದ್ರ ಸರಕಾರವು ಉನ್ನತ ಮಟ್ಟದ ಇಂಟರ್ ಮಿನಿಸ್ಟಿರಿಯಲ್ ಗ್ರೂಪ್ ರಚಿಸಿತ್ತು. ಅದು ಗೃಹ ಸಚಿವಾಲಯ, ಕೃಷಿ ಮತ್ತು ಸಹಕಾರ ಸಚಿವಾಲಯ, ಕಂಪನಿ ವ್ಯವಹಾರಗಳ ಸಚಿವಾಲಯಗಳ ಜೊತೆಗೆ ಮತ್ತು ಸಿಬಿಐ, ರಿಸರ್ವ್ ಬ್ಯಾಂಕ್, ಸೆಬಿ ಮುಂತಾದ ಸಂಸ್ಥೆಗಳ ಜೊತೆಗೆ ವಿವರವಾಗಿ ಚರ್ಚಿಸಿ, ಅಧ್ಯಯನ ಮಾಡಿ ವಿವರವಾದ ವರದಿಯನ್ನು ಸಿದ್ಧಪಡಿಸಿದೆ. ಈ ವರದಿಯಲ್ಲಿ ಚಿಟ್ ಫಂಡ್, ನಿಧಿ, ಎನ್.ಬಿ.ಎಫ್‌ಸಿ, ಸಹಕಾರ ಸಂಘಗಳು ಮುಂತಾದವುಗಳ ಚಟುವಟಿಕೆಗಳ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ. ಈ ವರದಿಯಲ್ಲಿ ಸಹಕಾರ ಸಂಘಗಳ ಬಗ್ಗೆ ಉಲ್ಲೇಖವಿದ್ದಿದ್ದನ್ನು ಮಾತ್ರ ಇಲ್ಲಿ ನೀಡಲಾಗಿದೆ.

- ನೋಂದಣಿ ಪ್ರಾಧಿಕಾರಗಳು ಶಿಕ್ಷಿಸಲು ಸಕ್ಷಮವಾಗಿರದಂತಹ ಕಾಯ್ದೆಗಳಿವೆ.
- ಕ್ಷೇತ್ರವ್ಯಾಪ್ತಿಯ ಬಗ್ಗೆ ವಿವಿಧ ಪ್ರಾಧಿಕಾರಗಳ ನಡುವೆ ಗೊಂದಲಗಳಿವೆ. ಯಾವ ಪ್ರಾಧಿಕಾರ ಕ್ರಮ ಆರಂಭಿಸಬೇಕು ಎಂಬ ಸ್ಪಷ್ಟತೆಯಿಲ್ಲ.
- ಕಾಯ್ದೆಗಳಲ್ಲಿನ ಗೊಂದಲದ ದುರ್ಲಾಭವನ್ನು ಠೇವಣಿ ಪಡೆವ ಸಂಸ್ಥೆಗಳು ಪಡೆಯುತ್ತಿವೆ.
- ಸೆಬಿ ಮತ್ತಿತರ ಪ್ರಾಧಿಕಾರಗಳಿಂದ ಸಾರ್ವಜನಿಕರಿಂದ ಹಣ ಸಂಗ್ರಹಿಸುವುದನ್ನು ನಿಷೇಧಿಸಲ್ಪಟ್ಟ ಸಂಸ್ಥೆಗಳು ಮಲ್ಟಿ ಸ್ಟೇಟ್ ಕೋಆಪರೇಟಿವ್ ಸೊಸೈಟಿಸ್ ಕಾಯ್ದೆಗಳಡಿ ಸಂಸ್ಥೆ ನೋಂದಾಯಿಸಿಕೊಂಡು ಠೇವಣಿ ಸಂಗ್ರಹ ಮುಂದುವರೆಸುತ್ತಿವೆ. (ಸಹಾರಾ ಉತ್ತಮ ಉದಾಹರಣೆ)
- ಮಲ್ಟಿ ಸ್ಟೇಟ್ ಕೋಆಪರೇಟಿವ್ ಸೊಸೈಟಿಸ್ ಕಾಯ್ದೆಯಡಿ ನೋಂದಣಿ ಪ್ರಾಧಿಕಾರಕ್ಕೆ ಪರಿವೀಕ್ಷಣೆ ಮತ್ತು ವಿಶೇಷ ಆಡಿಟ್ ನಡೆಸಲು ಆದೇಶಿಸಲು ಅವಕಾಶವಿದೆ. ಸಹಕಾರ ಸಂಘಗಳಿಗೆ ಹಣಕಾಸಿನ ಮಾನದಂಡಗಳನ್ನು ವಿಧಿಸಲು ಅಧಿಕಾರಗಳಿಲ್ಲ.

ಈ ಹಿನ್ನೆಲೆಯಲ್ಲಿ ಇಂಟರ್ ಮಿನಿಸ್ಟಿರಿಯಲ್ ಗ್ರುಪ್ ವಿವಿಧ ಶಿಫಾರಸ್ಸುಗಳನ್ನು ಮಾಡಿದ್ದು ಅದರಲ್ಲಿ ಪ್ರಮುಖವಾದವುಗಳು ಈ ಕೆಳಗಿವೆ:

1) ನ್ಯಾಷನಲ್ ಇಂಟಲಿಜೆನ್ಸ್ ಮೆಕ್ಯಾನಿಸಮ್ ರಚಿಸಲು ಕ್ರಮ ಕೈಗೊಳ್ಳಬೇಕು.
2) ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಮತ್ತು ಠೇವಣಿದಾರರ ಹಿತರಕ್ಷಣಾ ವಿಧೇಯಕ, 2015
3) ಮಲ್ಟಿ ಸ್ಟೇಟ್ ಕೋಆಪರೇಟಿವ್ ಸೊಸೈಟಿ ಕಾಯ್ದೆಗೆ ತಿದ್ದುಪಡಿ ಮೂಲಕ ಸದಸ್ಯರಿಂದಲೂ ಠೇವಣಿ ಸಂಗ್ರಹಕ್ಕೆ ನಿಷೇಧ
4) ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆಗೆ ತಿದ್ದುಪಡಿ ಮೂಲಕ ಸಹಕಾರ ಸಂಘಗಳ ಠೇವಣಿಗಳು ಸಹ ರಿಸರ್ವ್ ಬ್ಯಾಂಕಿನ ಸುಪರ್ದಿಗೆ ಒಳಪಡುತ್ತವೆ. (ಮತದಾನದ ಅಧಿಕಾರ ಹೊಂದಿರದ ಸದಸ್ಯರಿಂದ ಸಂಗ್ರಹಿಸಿದ ಠೇವಣಿ ಇದ್ದರೆ)

ಇಂಟರ್ ಮಿನಿಸ್ಟಿರಿಯಲ್ ಗ್ರೂಪ್ ಮಾಡಿದ ಶಿಫಾರಸ್ಸಿನ ಅನ್ವಯ "ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಮತ್ತು ಠೇವಣಿದಾರರ ಹಿತರಕ್ಷಣಾ ವಿಧೇಯಕ, 2015" ದ ಕರಡನ್ನು ಸಿದ್ಧಪಡಿಸಿ ಅದನ್ನು ಸಾರ್ವಜನಿಕ ಸಲಹೆ ಆಕ್ಷೇಪಣೆಗಾಗಿ ಕೇಂದ್ರ ಸರ್ಕಾರವು 18 ನವೆಂಬರ್ 2016 ರಂದು "ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಮತ್ತು ಠೇವಣಿದಾರರ ಹಿತರಕ್ಷಣಾ ವಿಧೇಯಕ, 2016" ಅನ್ನು ಪ್ರಕಟಿಸಿತ್ತು. ಸಾರ್ವಜನಿಕರ ಸಲಹೆಗಳ ಆಧಾರದ ಮೇಲೆ ವಿಧೇಯಕದ ಕರಡನ್ನು ಪರಿಷ್ಕರಿಸಿ "ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ವಿಧೇಯಕ, 2018" ಅನ್ನು ಲೋಕ ಸಭೆಯಲ್ಲಿ ಜುಲೈ 18, 2018 ರಂದು ಮಂಡಿಸಲಾಗಿತ್ತು. ಲೋಕಸಭೆಯು ಈ ವಿಧೇಯಕವನ್ನು ಹೆಚ್ಚಿನ ಚರ್ಚೆಗೆ ವೀರಪ್ಪ ಮೋಯ್ಲಿಯವರು ಅಧ್ಯಕ್ಷರಾಗಿರುವ ಹಣಕಾಸು ಸ್ಥಾಯೀ ಸಮಿತಿಗೆ ಕಳುಹಿಸಲಾಗಿತ್ತು. ಜನವರಿ 3, 2019 ರಂದು ಸ್ಥಾಯೀ ಸಮಿತಿಯು ತನ್ನ ವರದಿ ನೀಡಿತು. ನಂತರ ವಿಧೇಯಕವನ್ನು ಲೋಕಸಭೆಯಲ್ಲಿ ಮಂಡಿಸಿ, ಲೋಕಸಭೆಯು 13 ಫೆಬ್ರವರಿ 2019 ರಂದು ಅನುಮೋದನೆ ನೀಡಿತು. ಅಷ್ಟರಲ್ಲೇ ಅಧಿವೇಶನ ಮುಕ್ತಾಯವಾಗಿದ್ದರಿಂದ ರಾಜ್ಯ ಸಭೆಯಲ್ಲಿ ಅನುಮೋದನೆ ಪಡೆಯಲು ಸಾಧ್ಯವಾಗಲಿಲ್ಲ. ಸರಕಾರವು 21 ಫೆಬ್ರವರಿ 2019 ರಂದು ಸುಗ್ರೀವಾಜ್ಞೆಯನ್ನು ಹೊರಡಿಸುವ ಮೂಲಕ "ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಸುಗ್ರೀವಾಜ್ಞೆ, 2019" ಜಾರಿಗೆ ತಂದಿದೆ.

ಏನಿದೆ ಈ ಸುಗ್ರೀವಾಜ್ಞೆಯಲ್ಲಿ ?

ಈ ಸುಗ್ರೀವಾಜ್ಞೆಯು ಸಂಸ್ಥೆಗಳು ಸಾರ್ವಜನಿಕರಿಂದ ಸಂಗ್ರಹಿಸುವ ಠೇವಣಿಗಳನ್ನು ಎರಡು ಭಾಗವಾಗಿ ವಿಂಗಡಿಸಿದೆ. ಒಂದು ನಿಯಂತ್ರಿತ ಠೇವಣಿಗಳು, ಇನ್ನೊಂದು ಅನಿಯಂತ್ರಿತ ಠೇವಣಿಗಳು. ಸುಗ್ರೀವಾಜ್ಞೆಯ

ಮೊದಲನೆಯ ಶೆಡ್ಯೂಲ್‌ನಲ್ಲಿ "ನಿಯಂತ್ರಿತ ಠೇವಣಿ ಯೋಜನೆ"ಗಳ ಮತ್ತು ಪ್ರತಿಯೊಂದು ಅಂತಹ ಯೋಜನೆಗಳ ನಿಯಂತ್ರಣ ಪ್ರಾಧಿಕಾರಗಳ ಪಟ್ಟಿಯನ್ನು ನೀಡಲಾಗಿದೆ. ಇವುಗಳ ಹೊರತು ಬೇರೆ ರೀತಿಯ ಠೇವಣಿಗಳ ಸಂಗ್ರಹವನ್ನು "ಅನಿಯಂತ್ರಿತ ಠೇವಣಿ ಸಂಗ್ರಹಣೆ" ಎಂದೇ ಪರಿಗಣಿಸಲಾಗುವುದು ಮತ್ತು ಅಂತಹ ಅನಿಯಂತ್ರಿತ ಠೇವಣಿ ಸಂಗ್ರಹಣೆಯನ್ನು ಸಂಪೂರ್ಣ ನಿಷೇಧಿಸಲಾಗಿದೆ. ಅಲ್ಲದೇ ಅದು ಶಿಕ್ಷಾರ್ಹ ಅಪರಾಧವಾಗಿದೆ.

ಸುಗ್ರೀವಾಜ್ಞೆಯ ಮೊದಲನೆಯ ಶೆಡ್ಯೂಲ್‌ನಲ್ಲಿ ಶೇರು, ಮ್ಯೂಚ್ಯುವಲ್ ಫಂಡ್ ಇತ್ಯಾದಿ ಸೆಬಿಯಿಂದ ಅನುಮತಿ ಪಡೆದ ಸಂಸ್ಥೆಗಳ ಯೋಜನೆಗಳು, ರಿಸರ್ವ್ ಬ್ಯಾಂಕಿನ ಲೈಸೆನ್ಸ್ ಪಡೆದ ಬ್ಯಾಂಕುಗಳ ಸ್ವೀಕರಿಸುವ ಠೇವಣಿಗಳು, ಐಆರ್‌ಡಿಎ ಅನುಮತಿ ಪಡೆದ ವಿಮಾ ಸಂಸ್ಥೆಗಳಲ್ಲಿನ ಯೋಜನೆಗಳು, ರಾಜ್ಯಗಳ ಕಾಯ್ದೆಯಡಿ ನೋಂದಾಯಿತವಾದ ಸಹಕಾರಿ ಸಂಸ್ಥೆಗಳು, ಚಿಟ್ ಫಂಡ್ ಸಂಸ್ಥೆಗಳು, ಇತ್ಯಾದಿ ಒಂಭತ್ತು ರೀತಿಯ ನಿಯಂತ್ರಣ ಪ್ರಾಧಿಕಾರದಡಿ ಬರುವ ಠೇವಣಿ ಯೋಜನೆಗಳನ್ನು "ನಿಯಂತ್ರಿತ ಠೇವಣಿ ಯೋಜನೆಗಳು" ಎಂದು ಪರಿಗಣಿಸಲಾಗಿದೆ. ಇದಲ್ಲದೇ ಯಾವುದೇ ಕಾಯ್ದೆಯಡಿ ರಚಿತಗೊಂಡ ಯಾವುದೇ ನಿಯಂತ್ರಣ ಪ್ರಾಧಿಕಾರ ಯಾವುದೇ ಯೋಜನೆಯಡಿ ಸ್ವೀಕರಿಸಿದ ಠೇವಣಿಗಳು ಅಥವಾ ಕೇಂದ್ರ ಸರ್ಕಾರ ಅಧಿಸೂಚಿಸಿದ ಯಾವುದೇ ಠೇವಣಿ ಯೋಜನೆಗಳನ್ನು "ನಿಯಂತ್ರಿತ ಠೇವಣಿ" ಎಂದೇ ಪರಿಗಣಿಸಲಾಗಿದೆ.

ಸಹಕಾರಿ ಸಂಸ್ಥೆಗಳ ಮೇಲೆ ಈ ಸುಗ್ರೀವಾಜ್ಞೆಯ ಪರಿಣಾಮ

ಈ ಸುಗ್ರೀವಾಜ್ಞೆಯು ದೇಶದ ಎಲ್ಲಾ ರೀತಿಯ ಹಣಕಾಸು ಸಂಸ್ಥೆಯ ಮೇಲೆ ದೂರಗಾಮಿ ಪರಿಣಾಮವನ್ನು ಬೀರುತ್ತದೆಯಾದರೂ ಈ ಟಿಪ್ಪಣಿಯನ್ನು ವಿಶೇಷವಾಗಿ ಸಹಕಾರಿ ಸಂಸ್ಥೆಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ.

ಈ ಸುಗ್ರೀವಾಜ್ಞೆಯಲ್ಲಿ "ಠೇವಣಿ ಸ್ವೀಕರಿಸುವವ" (ಡೆಪಾಸಿಟ್ ಟೇಕರ್) ವ್ಯಾಖ್ಯೆಯಡಿ "ಸಹಕಾರ ಸಂಘ"ಗಳನ್ನೂ ಸೇರಿಸಲಾಗಿದೆ. ಸುಗ್ರೀವಾಜ್ಞೆಯ ಮೊದಲನೆಯ ಶೆಡ್ಯೂಲ್‌ನಲ್ಲಿ ಸಹಕಾರ ಸಂಘಗಳ ಕಾಯ್ದೆ, 1912 ಅಡಿ ಅಥವಾ ಯಾವುದೇ ರಾಜ್ಯದ ಯಾವುದೇ ಕಾಯ್ದೆಯಡಿ ನೋಂದಾಯಿತವಾದ ಸಹಕಾರಿ ಸಂಸ್ಥೆಗಳು ನೀಡುವ ಯಾವುದೇ ಠೇವಣಿ ಯೋಜನೆಯನ್ನು "ನಿಯಂತ್ರಿತ ಠೇವಣಿ ಯೋಜನೆ"ಯೆಂದು ಪರಿಗಣಿಸಲಾಗದೆ. ಆದ್ದರಿಂದ ಕರ್ನಾಟಕದಲ್ಲಿರುವ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಈ ಎರಡೂ ಕಾಯ್ದೆಯಡಿ ನೋಂದಾಯಿತವಾದ ಸಹಕಾರ ಸಂಸ್ಥೆಗಳು ನೀಡುವ ಯೋಜನೆಗಳು ಈ ಸುಗ್ರೀವಾಜ್ಞೆಯಡಿ ನಿಯಂತ್ರಿತ ಠೇವಣಿ ಯೋಜನೆಗಳ ವ್ಯಾಖ್ಯೆಯಡಿಯೇ ಸಹ ಒಳಪಟ್ಟಿವೆ. ಹೀಗಾಗಿ ಸೌಹಾರ್ದ ಕಾಯ್ದೆಯೂ ಸೇರಿದಂತೆ ದೇಶದ ಎಲ್ಲಾ ರಾಜ್ಯಗಳ ಸಹಕಾರಿ ಸಂಸ್ಥೆಗಳಿಗೆ ಇದು ಅನ್ವಯವಾಗುತ್ತದೆ.

ನಮ್ಮ ದೇಶದಲ್ಲಿ ಒಂದು ರಾಜ್ಯಕ್ಕಿಂತ ಹೆಚ್ಚಿಗೆ ರಾಜ್ಯಗಳ ಅಡಿ ಕಾರ್ಯನಿರ್ವಹಿಸುವ ಸಹಕಾರ ಸಂಘಗಳಿಗಾಗಿ "ಬಹುರಾಜ್ಯಗಳ ಸಹಕಾರ ಸಂಘಗಳ ಕಾಯ್ದೆ, 2002" ಎಂಬ ಕೇಂದ್ರ ಕಾಯ್ದೆ ಜಾರಿಯಲ್ಲಿದೆ. ಈ ಸುಗ್ರೀವಾಜ್ಞೆಯಡಿಯ ಸಹಕಾರ ಸಂಘಗಳಲ್ಲಿ ಠೇವಣಿ ಹೂಡಿದ ಮತದಾನ ಅಧಿಕಾರ ಹೊಂದಿದ ಸದಸ್ಯರು ಮಾಡಿದ ಠೇವಣಿಗಳು ಸಹ "ನಿಯಂತ್ರಿತ ಠೇವಣಿ ಯೋಜನೆ" ಎಂದು ಪರಿಗಣಿಸಲ್ಪಡುತ್ತದೆ.

ಸಹಕಾರ ಸಂಘಗಳು ಸ್ವೀಕರಿಸುವ ಎಲ್ಲಾ ಠೇವಣಿಗಳೂ ನಿಯಂತ್ರಿತ ಠೇವಣಿ ವ್ಯಾಖ್ಯೆಯಡಿ ಬರುತ್ತವೆಯೇ?

- ಭಾರತೀಯ ರಿಸರ್ವ ಬ್ಯಾಂಕ್ ಅಧಿನಿಯಮ, 1934 ರ ಕಲಂ 45–ಐ ರ ಕ್ಲಾಸ್–(ಬಿಬಿ) ರಲ್ಲಿ "ಠೇವಣಿ" (ಡೆಪಾಸಿಟ್) ಎಂಬ ಶಬ್ದಕ್ಕೆ ವ್ಯಾಖ್ಯಾನ ನೀಡಲಾಗಿದೆ.
- ಸದರಿ ವ್ಯಾಖ್ಯಾನದ ವಿವರಣೆಯಲ್ಲಿ ಮೂರನೇ ವಿವರಣೆಯನ್ನು ಇದೇ ಸುಗ್ರೀವಾಜ್ಞೆಯು ತಿದ್ದುಪಡಿಯ ಮೂಲಕ ಸೇರಿಸಲಾಗಿದೆ. ಅದರಂತೆ "ಸಹಕಾರ ಸಂಘಗಳು ತಮ್ಮ ಮತನೀಡುವ ಹಕ್ಕುಳ್ಳ ಸದಸ್ಯರಿಂದ ಸ್ವೀಕರಿಸುವ ಹಣ" ವನ್ನು ಠೇವಣಿ ಎಂದು ವಿವರಿಸಲಾಗಿದೆ.
- ಅಂದರೆ, ಮತದಾನದ ಹಕ್ಕು ಇಲ್ಲದ, ಸಹ ಸದಸ್ಯರು ಮತ್ತು ನಾಮ ಮಾತ್ರ ಸದಸ್ಯರಿಂದ ಸ್ವೀಕರಿಸುವ ಹಣವನ್ನು ಠೇವಣಿ ಎಂದು ಪರಿಗಣಿಸಲಾಗುವುದಿಲ್ಲ.
- ಅಲ್ಲದೇ ಬಹುರಾಜ್ಯಗಳ ಸಹಕಾರ ಸಂಘಗಳ ಕಾಯ್ದೆ, 2002 ಗೆ ಮಾಡಿದ ತಿದ್ದುಪಡಿಯಂತೆ ಬಹುರಾಜ್ಯಗಳ ಸಹಕಾರ ಸಂಘಗಳು ಮತನೀಡುವ ಸದಸ್ಯರಿಂದ ಮಾತ್ರ ಠೇವಣಿ ಸ್ವೀಕರಿಸಬಹುದು.

ಮೇಲಿನ ತಿದ್ದುಪಡಿಗಳ ಮೂಲಕ ಸ್ಪಷ್ಟವಾಗುವುದೇನೆಂದರೆ, ಸಹಕಾರ ಸಂಘಗಳು (ರಾಜ್ಯಗಳ ಕಾಯ್ದೆಯಡಿ ಮತ್ತು ಬಹುರಾಜ್ಯಗಳ ಕಾಯ್ದೆಯಡಿ ಇರುವ ಸಹಕಾರ ಸಂಘಗಳು) ತಮ್ಮ ಮತ ನೀಡುವ ಹಕ್ಕುಳ್ಳ ಸದಸ್ಯರಿಂದ ಸ್ವೀಕರಿಸಿದ ಠೇವಣಿಗಳು ಮಾತ್ರ "ನಿಯಂತ್ರಿತ ಠೇವಣಿ ಯೋಜನೆ" ವ್ಯಾಪ್ತಿಯಲ್ಲಿ ಬರುತ್ತವೆ ಮತ್ತು ಈ ಸುಗ್ರೀವಾಜ್ಞೆಯು "ಅನಿಯಂತ್ರಿತ ಠೇವಣಿ ಯೋಜನೆಗಳನ್ನು ನಿಷೇಧಿಸಿದೆ.

ಒಟ್ಟಾರೆ ಹೇಳುವುದೆಂದರೆ, ಈ ಸುಗ್ರೀವಾಜ್ಞೆಯು ಸಹಕಾರ ಸಂಸ್ಥೆಗಳು ಮತನೀಡುವ ಸದಸ್ಯರಿಂದ ಮಾತ್ರ ಠೇವಣಿಗಳನ್ನು ಸ್ವೀಕರಿಸಬಹುದು. ಮತ ನೀಡುವ ಅಧಿಕಾರ ಹೊಂದಿರದ ಸದಸ್ಯರಿಂದ (ಸಹ ಸದಸ್ಯರು ಮತ್ತು ನಾಮ ಮಾತ್ರ ಸದಸ್ಯರು) ಸಹಕಾರ ಸಂಘಗಳು ಯಾವುದೇ ರೀತಿಯ ಠೇವಣಿಗಳನ್ನು ಸ್ವೀಕರಿಸುವಂತಿಲ್ಲ ಮತ್ತು ಹಾಗೆ ಸ್ವೀಕರಿಸಿದ್ದೇ ಆದಲ್ಲಿ ಅದು ಶಿಕ್ಷಾರ್ಹ ಅಪರಾಧ.

ಸಕ್ಷಮ ಪ್ರಾಧಿಕಾರ

ಸರ್ಕಾರದ ಕಾರ್ಯದರ್ಶಿಗಿಂತ ಕೆಳಗಿನವರಲ್ಲದ ಅಧಿಕಾರಿಯೊಬ್ಬರನ್ನು ಈ ಸುಗ್ರೀವಾಜ್ಞೆಯಡಿ ಸಕ್ಷಮ ಪ್ರಾಧಿಕಾರವೆಂದು ನೇಮಿಸಲು ಅವಕಾಶವಿದೆ. ಅವರಿಗೆ ಸಹಾಯ ಮಾಡಲು ಅಧೀನ ಅಧಿಕಾರಿಗಳನ್ನು ನೇಮಿಸಲೂ ಅವಕಾಶವಿದೆ.

ಸಕ್ಷಮ ಪ್ರಾಧಿಕಾರದ ಅಧಿಕಾರವೇನು?

- ತನಿಖೆ ಮತ್ತು ವಿಚಾರಣೆ ನಡೆಸಲು ಸಕ್ಷಮ ಪ್ರಾಧಿಕಾರಕ್ಕೆ ಯಾವುದೇ ವ್ಯಕ್ತಿಗೆ ಸಮನ್ ನೀಡಿ ತನ್ನ ಮುಂದೆ ಹಾಜರಿರಲು ಮತ್ತು ದಾಖಲೆ ಹಾಜರು ಪಡಿಸಲು ಅಗತ್ಯಪಡಿಸಬಹುದು, ಸಾಕ್ಷಿಗಳನ್ನು ದಾಖಲಿಸುವುದೂ

ಸೇರಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರಡಿ ಇರುವ ಎಲ್ಲಾ ಅಧಿಕಾರಗಳಿವೆ. ಸಕ್ಷಮ ಪ್ರಾಧಿಕಾರದ ಮುಂದೆ ನಡೆಯುವ ಎಲ್ಲಾ ವ್ಯವಹರಣೆಗಳನ್ನು ಭಾರತೀಯ ದಂಡ ಸಂಹಿತೆಯಡಿ ನ್ಯಾಯಿಕ ವ್ಯವಹರಣೆಗಳೆಂದು ಪರಿಗಣಿಸಲ್ಪಡುತ್ತವೆ.

- ಸಹಕಾರಿ ಸಂಸ್ಥೆಗಳು ಸಕ್ಷಮ ಪ್ರಾಧಿಕಾರಕ್ಕೆ ತಮ್ಮ ವ್ಯವಹಾರದ ಬಗ್ಗೆ ನಿಗದಿತ ರೀತಿಯಲ್ಲಿ ಮಾಹಿತಿ ಸಲ್ಲಿಸುವುದು ಕಡ್ಡಾಯ.
- ಯಾವುದೇ ಸಹಕಾರ ಸಂಸ್ಥೆಯು ಅನಿಯಂತ್ರಿಯ ಯೋಜನೆಯಡಿ (ನಿಷೇಧಕ್ಕೊಳಗಾದ) ಠೇವಣಿ ಸ್ವೀಕರಿಸುತ್ತದೆ ಎಂದು ಸಕ್ಷಮ ಪ್ರಾಧಿಕಾರಕ್ಕೆ ನಂಬಬಹುದಾದ ಕಾರಣಗಳಿದ್ದಲ್ಲಿ (ಅಂದರೆ, ಸಹ ಸದಸ್ಯ ಅಥವಾ ನಾಮ ಮಾತ್ರ ಸದಸ್ಯರಿಂದ ಠೇವಣಿ ಸ್ವೀಕರಿಸುತ್ತಿದ್ದಲ್ಲಿ) ಅಂತಹ ಠೇವಣಿಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಳ್ಳಬಹುದು. ಅಗತ್ಯಕ್ಕೆ ತಕ್ಕ ವಿಚಾರಣೆ ಮತ್ತು ತನಿಖೆ ನಡೆಸಬಹುದು.

ವಿಶೇಷ ಪ್ರಾಧಿಕಾರದ ರಚನೆ

ಕೇಂದ್ರ ಸರ್ಕಾರವು ಈಗಿರುವ ಯಾವುದೇ ಪ್ರಾಧಿಕಾರಕ್ಕೆ ಅಥವಾ ರಚಿಸಬಹುದಾದ ಹೊಸ ಪ್ರಾಧಿಕಾರಕ್ಕೆ ಇಡೀ ದೇಶದ ಠೇವಣಿ ಸ್ವೀಕರಿಸುವವರ ಬಗ್ಗೆ ಆನ್‌ಲೈನ್ ಡಾಟಾ ಬೇಸ್ ನಿರ್ವಹಿಸುವ ಅಧಿಕಾರ ನೀಡಿದೆ. ತನ್ಮೂಲಕ ದೇಶದ ಎಲ್ಲಾ ರೀತಿಯಲ್ಲಿ ಠೇವಣಿ ಸ್ವೀಕರಿಸುವ ಮಾಹಿತಿಗಳ ಕೋಶವೊಂದು ನಿರ್ಮಾಣವಾಗಲಿದೆ. ಆರ್.ಬಿ.ಐ, ಸೆಬಿ ಅಂತಹ ಯಾವುದೇ ನಿಯಂತ್ರಣ ಪ್ರಾಧಿಕಾರಕ್ಕೆ ಅಥವಾ ಯಾವುದೇ ಸಕ್ಷಮ ಪ್ರಾಧಿಕಾರದಿಂದ ಅಗತ್ಯ ಮಾಹಿತಿಯನ್ನು ಈ ಪ್ರಾಧಿಕಾರವು ಪಡೆಯಬಹುದು. ಮುಂದುವರೆದು, ಯಾವುದೇ ಬ್ಯಾಂಕು ತನ್ನ ಗ್ರಾಹಕನು ಅನಿಯಂತ್ರಿತ ಠೇವಣಿ ಸ್ವೀಕರಿಸುತ್ತಿದ್ದಾನೆ ಎಂದು ಕಂಡುಬಂದಲ್ಲಿ ಅಂತಹ ಮಾಹಿತಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ತಿಳಿಸುವುದು ಕಡ್ಡಾಯವಾಗಿದೆ. ಈ ಪ್ರಾಧಿಕಾರವು ಅಗತ್ಯವಿದ್ದಲ್ಲಿ ಸಿಬಿಐಗೂ ಮಾಹಿತಿ ಹಂಚಿಕೊಳ್ಳಬೇಕಾಗುತ್ತದೆ.

ಸಕ್ಷಮ ನ್ಯಾಯಾಲಯ:

ಜಿಲ್ಲಾ ನ್ಯಾಯಾಧೀಶರ ದರ್ಜೆಯ ನ್ಯಾಯಾಧೀಶರುಗಳನ್ನು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಂದಿಗೆ ಸಮಾಲೋಚಿಸಿ ರಾಜ್ಯ ಸರ್ಕಾರವು ಈ ಸುಗ್ರೀವಾಜ್ಞೆಯಡಿ ಸಕ್ಷಮ ನ್ಯಾಯಾಲಯವೆಂದು ನೇಮಿಸುತ್ತದೆ. ಅಂತಹ ನ್ಯಾಯಾಲಯಗಳು ಈ ಸುಗ್ರೀವಾಜ್ಞೆಯಡಿ ಕಾರ್ಯನಿರ್ವಹಿಸುತ್ತವೆ.

ಸಕ್ಷಮ ನ್ಯಾಯಾಲಯದ ಅಧಿಕಾರವೇನು?

- ಸಕ್ಷಮ ಪ್ರಾಧಿಕಾರ ತಾತ್ಕಾಲಿಕ ಮುಟ್ಟುಗೋಲು ಹಾಕಿಕೊಂಡ ಆದೇಶವನ್ನು ಸ್ಥಿರೀಕಸುವ ಅಥವಾ ತೆರವುಗೊಳಿಸುವ ಅಧಿಕಾರ
- ಮುಟ್ಟುಗೋಲು ಹಾಕಿಕೊಂಡ ಆಸ್ತಿಗಳನ್ನು ಸೂಕ್ತ ವಿಚಾರಣೆ ನಡೆಸಿ ವಿಲೇವಾರಿ ಮಾಡಿ ಬಂದ ಹಣವನ್ನು ಠೇವಣೀದಾರರಿಗೆ ಹಿಂತಿರುಗಿಸಲು ಕ್ರಮ ಕೈಗೊಳ್ಳುವ ಅಧಿಕಾರ.
- ಮುಟ್ಟುಗೋಲು ಆದೇಶ ಹೊರಡಿಸುವ ಮೊದಲು ಪರಭಾರೆಯಾದ ಆಸ್ತಿಗಳನ್ನು ಮುಟ್ಟುಗೋಲು ಆದೇಶ ಹೊರಡಿಸಲೂ ಸಹ ಅಧಿಕಾರ.
- ಸಿಬಿಐ ಮತ್ತು ಪೋಲೀಸ್‌ರಿಗೆ ತನಿಖೆ ನಡೆಸುವ ಅಧಿಕಾರವಿದೆಯೇ?
- ಸಕ್ಷಮ ಪ್ರಾಧಿಕಾರದ ಶಿಫಾರಸ್ಸಿನಿಂದ ಸಿಬಿಐ ಈ ಸುಗ್ರೀವಾಜ್ಞೆಯಡಿಯ ಅಪರಾಧಗಳ ತನಿಖೆ ನಡೆಸಬಹುದಾಗಿದೆ.
- ಈ ಸುಗ್ರೀವಾಜ್ಞೆಯಡಿ "ಅಪರಾಧ" ಎಂದು ಘೋಷಿಸಿರುವ ಕೃತ್ಯ ಎಸಗಿದ ಸಂದರ್ಭದಲ್ಲಿ ಪೋಲೀಸರಿಗೆ ಯಾವುದೇ ಸ್ಥಳ, ಕಟ್ಟಡ ಪ್ರವೇಶಿಸಿ ಹುಡುಕಾಟ ನಡೆಸಿ ದಾಖಲೆ ಅಥವಾ ಆಸ್ತಿಗಳನ್ನು ವಶಕ್ಕೆ ಪಡೆಯುವ ಅಧಿಕಾರ ಪೋಲೀಸರಿಗೆ ಇದೆ. ಬೀಗ, ಬಾಗಿಲು ಒಡೆದು ಪ್ರವೇಶಿಸುವ ಅಧಿಕಾರವೂ ಇದೆ. ತುರ್ತು ಸ್ಥಿತಿಯಲ್ಲಿ ವಾರೆಂಟ್ ಇಲ್ಲದೆಯೂ ಈ ಕೆಲಸ ಮಾಡುವ ಅಧಿಕಾರವಿದೆ. ಬ್ಯಾಂಕ್ ಖಾತೆ ಸ್ಥಗಿತಕ್ಕೂ ಕ್ರಮ ಕೈಗೊಳ್ಳಬಹುದು.

ಸಕ್ಷಮ ಪ್ರಾಧಿಕಾರದ ಅಥವಾ ಸಕ್ಷಮ ನ್ಯಾಯಾಲಯದ ಆದೇಶದ ವಿರುದ್ಧ ಅಪೀಲಿಗೆ ಅವಕಾಶವಿದೆಯೇ?

- ಸಕ್ಷಮ ನ್ಯಾಯಾಲಯದ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅಪೀಲು ನಿರ್ಧರಿಸುವ ಅಧಿಕಾರವಿದೆ.
- ಸಕ್ಷಮ ಪ್ರಾಧಿಕಾರ ಅಥವಾ ಸರ್ಕಾರಗಳು ಸಹ ಸಕ್ಷಮ ನ್ಯಾಯಾಲಯದ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

ಗಮನಿಸಲೇಬೇಕಾದ ಅಂಶಗಳು:

- ಅನಿಯಂತ್ರಿತ ಠೇವಣಿ ಸ್ವೀಕರಿಸುವುದಷ್ಟೇ ಅಪರಾಧ ಅಲ್ಲ. ಅಂತಹ ಠೇವಣಿಗಳ ಬಗ್ಗೆ ಪ್ರಚಾರವೂ ಅಪರಾಧ. (ಏಜೆಂಟ್‌ರುಗಳಿದ್ದರೆ ಅವರೂ ಅಪರಾಧಿ).
- ಸ್ವೀಕರಿಸಿದ ಠೇವಣಿಗೆ ಪ್ರತಿಯಾಗಿ ಬಡ್ಡಿ ಕೊಡುವುದಷ್ಟೇ ಅಲ್ಲ, ಪ್ರತಿಯಾಗಿ ಸೇವೆ, ವಸ್ತು ನೀಡುವುದಿದ್ದರೆ ಅಂತಹದ್ದೂ ನಿಷೇಧ. ಇದರಿಂದ ಬಂಗಾರದ ಅಂಗಡಿಗಳು ಪ್ರತಿ ತಿಂಗಳು ಹಣ ಪಡೆದು ನಿಶ್ಚಿತ ಅವಧಿಯ ನಂತರ ಆಭರಣ ಕೊಡುವಂತಹ ಚಟುವಟಿಕೆಗಳು, ನಿವೇಶನ ಅಥವಾ ಮನೆಗೆ ಕಂತುಗಳ ಮೂಲಕ ಬಿಲ್ಡರ್‌ಗಳಿಗೆ ಕೊಡುವ ಹಣ ಕೂಡ ನಿಷೇಧದ ವ್ಯಾಪ್ತಿಯಲ್ಲಿ ಬರುತ್ತವೆ. (ಇದನ್ನು ಭಾಗಶಃ ಖರೀದಿಯ ಮೊತ್ತ – Part payment of consideration, ಎಂದು ಪರಿಗಣಿಸಬಹುದು ಎಂಬ ಅಭಿಪ್ರಾಯವೂ ಇದೆ)

ಶಿಕ್ಷೆಯ ಸ್ವರೂಪ

Offences	Imprisonment	Fine (In Rs.)
Solicit deposit under UDS	1-5 year	2 – 10 Lakhs
Accept deposit under UDS	2-7 years	3-10 Lakhs

Fraud in repayment of deposit accepted under UDS	3-10 years	5 Lakhs to 200% of aggregate fund collected
Frauds in repayment of RDS(Bailable and congnizable only on complaint by the regulator)	Up to 7 years	5 Lakhs to higher of 25 Crores or 3 times of amount made out of such fraud
Failure to render service promised under RDS	Up to 7 Years	5 Lkhs to higher of 25 Crores or 3 times of amount made out of such fraud
Wrongful inducement - UDS	1-5 years	Up to 10 Lakhs
Repeated offenders	5 -10 years	10-50 crores
Failure file intimation by deposit taker or statement	-	Up to 5 Lakhs

ಜಾಹೀರಾತು ಪ್ರಕಟಣೆಯೂ ಅಪರಾಧ:

ಯಾವುದೇ ಪತ್ರಿಕೆಯು ಅನಿಯಂತ್ರಿತ ಠೇವಣಿ ಯೋಜನೆಗಳ ಬಗ್ಗೆ ಜಾಹೀರಾತು ಪ್ರಕಟಿಸಿದಲ್ಲಿ ಲೇಖನ ಪ್ರಕಟಿಸಿದಲ್ಲಿ ಸರ್ಕಾರವು ಅಂತಹ ಪತ್ರಿಕೆಗೆ ಉಚಿತವಾಗಿ ಅದನ್ನು ನಿರಾಕರಿಸುವ ಜಾಹೀರಾತನ್ನು ಅದೇ ಪ್ರಮಾಣದಲ್ಲಿ ಪ್ರಕಟಿಸಬೇಕೆಂದು ನಿರ್ದೇಶಿಸಬಹುದು.

ಕಾಯ್ದೆಯ ಇನ್ನಿತರ ವಿಶೇಷತೆಗಳು

- ಠೇವಣಿ ಸ್ವೀಕರಿಸಿದವರಿಂದ ಠೇವಣಿದಾರರಿಗೆ ನೀಡಬೇಕಾದ ಹಣಕ್ಕೆ ಪ್ರಥಮ ಆದ್ಯತೆ ನೀಡಲಾಗಿದೆ. ಈ ಸುಗ್ರೀವಾಜ್ಞೆಯ ಅಡಿ ಮುಟ್ಟುಗೋಲು ಹಾಕಿಕೊಂಡ ಆಸ್ತಿಯ ಮೇಲೆ ಕೂಡ ಠೇವಣಿದಾರರಿಗೆ ನೀಡುವ ಹಣಕ್ಕೆ ಪ್ರಥಮ ಆದ್ಯತೆ. ಸರ್ಕಾರಕ್ಕೆ, ಸ್ಥಳೀಯ ಸಂಸ್ಥೆಗಳ ಆಸಕ್ತಿಗಿಂತ ಠೇವಣಿದಾರರ ಆಸಕ್ತಿಗೆ ಆದ್ಯತೆ ನೀಡಲಾಗಿದೆ. (ಸರಫೇಸಿ ಕಾಯ್ದೆ ಮತ್ತು ದಿವಾಳಿ ಕಾಯ್ದೆಯ ಬೇಡಿಕೆಗಳ ಹೊರತು)
- ಕೇಂದ್ರ ಸರ್ಕಾರಕ್ಕೆ ಈ ಸುಗ್ರೀವಾಜ್ಞೆ ಮೂಲಕ ಠೇವಣಿ ಸ್ವೀಕರಿಸುವವರ ಬಗ್ಗೆ ಮಾಹಿತಿ ಸಂಗ್ರಹಿಸುವ ಪ್ರಾಧಿಕಾರವನ್ನು ರಚಿಸುವ ಅಧಿಕಾರ ನೀಡಲಾಗಿದೆ.
- ಠೇವಣಿ ಸ್ವೀಕರಿಸುವವರು ಸಕ್ಷಮ ಪ್ರಾಧಿಕಾರಕ್ಕೆ ತಮ್ಮ ವ್ಯವಹಾರದ ಬಗ್ಗೆ ಮಾಹಿತಿ ನೀಡುವುದು ಕಡ್ಡಾಯ. ತಪ್ಪಿದರೆ ದಂಡ.
- ಸಕ್ಷಮ ಪ್ರಾಧಿಕಾರವು ಸಿಬಿಐ ಜೊತೆಗೆ ಮತ್ತು ಈ ಕಾಯ್ದೆಯಡಿ ರಚಿಸುವ ವಿಶೇಷ ಪ್ರಾಧಿಕಾರದ ಜೊತೆ ಅನಿಯಂತ್ರಿತ ಠೇವಣಿಗಳಿಗೆ ಸಂಬಂಧಿಸಿದ ಮಾಹಿತಿ ವಿನಿಮಯ ಮಾಡುವುದು ಕಡ್ಡಾಯ. ಬ್ಯಾಂಕುಗಳು ಸಹ ತಮ್ಮಲ್ಲಿನ ಠೇವಣಿದಾರರು ನಿಷೇಧಕ್ಕೊಳಗಾದ ಅನಿಯಂತ್ರಿತ ಠೇವಣಿ ಸ್ವೀಕರಿಸುವ ಚಟುವಟಿಕೆ ನಡೆಸುತ್ತಿದ್ದಾರೆಂಬ ಸಂಶಯವಿದ್ದಲ್ಲಿ ಅಂತಹ ಮಾಹಿತಿಯನ್ನು ಸಕ್ಷಮ ಪ್ರಾಧಿಕಾರದ ಜೊತೆ ಹಂಚಿಕೊಳ್ಳಬೇಕಾಗುತ್ತದೆ.
- ಇತರೆ ಎಲ್ಲಾ ಕಾಯ್ದೆಗಳ ಪ್ರಾವಧಾನಗಳ ಮೇಲೆ ಈ ಸುಗ್ರೀವಾಜ್ಞೆಯ ಪ್ರಾವಧಾನಗಳು ಹೆಚ್ಚಿನ ಪರಿಣಾಮ ಹೊಂದಿರುತ್ತವೆ. (over riding effect)
- ಬೇರೆ ಕಾಯ್ದೆಯ ಅನ್ವಯವನ್ನು ಈ ಸುಗ್ರೀವಾಜ್ಞೆಗೆ ಪೂರಕವಾಗಿ ಮತ್ತು ಈ ಸುಗ್ರೀವಾಜ್ಞೆಯ ಪರಿಣಾಮವನ್ನು ಕಡಿಮೆ ಮಾಡಲು ಅವಕಾಶವಾಗದಂತೆ ಜಾರಿ ಮಾಡಲು ಅವಕಾಶವಿದೆ.

ಈ ಸುಗ್ರೀವಾಜ್ಞೆ ಜಾರಿಯಿಂದ ಬ್ಯಾಂಕಿಂಗ ನಿಯಂತ್ರಣ ಅಧಿನಿಯಮ, ಸಹಕಾರ ಸಂಘಗಳ ಕಾಯ್ದೆಗಳ (ಸೌಹಾರ್ದ ಸಹಕಾರಿಯೂ ಸೇರಿದಂತೆ) ಮೇಲೆ ಏನು ಪರಿಣಾಮವಾಗುತ್ತದೆ?

ಸಹಕಾರ ಸಂಘಗಳು (ಸೌಹಾರ್ದ ಸಹಕಾರಿಯೂ ಸೇರಿದಂತೆ) ಮತದಾನದ ಹಕ್ಕು ಹೊಂದಿದ ಸದಸ್ಯರಿಂದ ಮಾತ್ರ ಠೇವಣಿ ಸ್ವೀಕರಿಸಬೇಕಾಗುತ್ತದೆ. ಸಹ ಸದಸ್ಯ ಮತ್ತು ನಾಮ ಮಾತ್ರ ಸದಸ್ಯರಿಂದ ಠೇವಣಿ ಸ್ವೀಕರಿಸಲು ಅವಕಾಶವಿಲ್ಲ. ಒಂದು ವೇಳೆ ಸಹ ಸದಸ್ಯರಿಂದ ಮತ್ತು ನಾಮ ಮಾತ್ರ ಸದಸ್ಯರಿಂದ ಠೇವಣಿ ಸ್ವೀಕರಿಸಿದಲ್ಲಿ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ. ಅಲ್ಲದೇ ಸಕ್ಷಮ ಪ್ರಾಧಿಕಾರವು ಅಗತ್ಯ ಕ್ರಮಗಳನ್ನು ಕೈಗೊಂಡು ಠೇವಣಿದಾರರಿಗೆ ಅವರ ಹಣ ಮರುಪಾವತಿಸಲು ಕ್ರಮ ಕೈಗೊಳ್ಳಲು ಈ ಸುಗ್ರೀವಾಜ್ಞೆಯಲ್ಲಿ ಅವಕಾಶವಿದೆ. ಧನಾತ್ಮಕವಾಗಿ ಪತ್ತಿನ ಸಹಕಾರಿಗಳಲ್ಲಿ ಠೇವಣಿ ಇಡುವಲ್ಲಿ ಅದರ ಸದಸ್ಯರ ವಿಶ್ವಾಸಾರ್ಹತೆ ಹೆಚ್ಚಬಹುದು ಮತ್ತು ಠೇವಣಿ ಸುರಕ್ಷಿತ ಎಂಬ ಭಾವನೆ ಮೂಡಿ ಠೇವಣ ಪ್ರಮಾಣ ಹೆಚ್ಚಬಹುದು. ಪತ್ತಿನ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಇನ್ನೂ ಹೆಚ್ಚಬಹುದು.

ತಪ್ಪೊಪ್ಪಿಗೆ: ಕೆಲವು ಕಡೆ ಸುಗ್ರೀವಾಜ್ಞೆಯನ್ನು "ಕಾಯ್ದೆ" ಎಂದು ಉಲ್ಲೇಖಿಸಲಾಗಿದೆ.

RBI NEWS - APRIL 2019

K. Vittal Shetty, Banking consultant, Kohimavittal@Hotmail.com, Mobile : 9845699904

Policy Rates. Effective from April 04, 2019	**%**
Policy Repo Rate	**6.00%**
Reverse Repo Rate	**5.75%**
Marginal Standing Facility Rate	**6.25%**
BANK RATE	**6.25%**
RESERVE RATIOS	
Cash Reserve Ratio. **(CRR)**	**4.00%**
Statutory Reserve Ratio. (**SLR**). **Effective from April 13,2019**	**19.00%**

Apr 25, 2019

Scheduled Banks' Statement of Position in India as on Friday, April 12, 2019

(Amount in Billions of ₹)							
		SCHEDULED COMMERCIAL BANKS			ALL SCHEDULED BANKS		
		13-Apr-18	29-MAR-2019 *	12-APR-2019 *	13-Apr-18	29-MAR-2019 *	12-APR-2019 *
I	a) Deposits	113291.15	125725.53	125309.8	116316.9	129003.38	**128621.28**
	i) Demand	11819.7	15110.84	13679.1	12097.64	15422.73	**13982.7**
	ii) Time	101471.46	110614.7	111630.7	104219.28	113580.66	**114638.59**
II	INVESTMENTS	33823.07	33803.52	34412.54	34771.59	34749.02	**35351.45**
III	BANK CREDIT	84460.23	97691.91	96450.52	87035.37	100555.45	**99316.55**

IMPORTANT NEWS.

1). Apr 04, 2019: - First Bi-monthly Monetary Policy Statement, 2019-20 Resolution of the Monetary Policy Committee (MPC) Reserve Bank of India

On the basis of an assessment of the current and evolving macroeconomic situation, the Monetary Policy Committee (MPC) at its meeting today decided to:

• reduce the policy repo rate under the liquidity adjustment facility (LAF) by 25 basis points to 6.0 per cent from 6.25 per cent with immediate effect.

Consequently, the reverse repo rate under the LAF stands adjusted to 5.75 per cent, and the marginal standing facility (MSF) rate and the Bank Rate to 6.25 per cent.

The MPC also decided to maintain the neutral monetary policy stance.

These decisions are in consonance with the objective of achieving the medium-term target for consumer price index (CPI) inflation of 4 per cent within a band of +/- 2 per cent, while supporting growth.

The next meeting of the MPC is scheduled during June 3, 4 and 6, 2019.

II. Payment and Settlement Systems

Benchmarking India's Payment Systems

Efficient payment systems reduce the cost of exchanging goods and services and are indispensable to the functioning of financial markets. The past decade has witnessed several innovations in retail payments across the globe. Benchmarking India's Payments Systems is necessary to gauge India's progress against payment systems and instruments in major countries and give further impetus to the planned efforts for deepening the digitisation of payments. A report containing the findings of such an exercise will be placed on the RBI website by the end of May 2019.

Framework for Harmonizing Turn Around Time for the Resolution of Customer Complaints and Compensation

The Reserve Bank has directed various authorised payment systems to put in place appropriate customer grievance redressal mechanism. Further, for some payment systems the Reserve Bank has issued guidelines prescribing compensation to be paid to customers for delay in resolving failed transactions. It is, however, observed that the time taken for resolving customer complaint varies across payment systems. In order to have prompt and efficient customer service in all the electronic payment systems, it is necessary to harmonise the Turn Around Time (TAT) of resolution of customer complaints and chargebacks, and to have a compensation framework in place for the benefit of customers. The Reserve Bank proposes to put in place a framework on TAT for resolution of customer complaints and compensation framework across all authorised payment systems by the end of June 2019.

III. Financial Inclusion

Convergence of Priority Sector Lending (PSL) guidelines for housing loans between Scheduled Commercial Banks (SCBs) and Regional Rural Banks (RRBs) & Small Finance Banks (SFBs)

The housing loan limits for eligibility under Priority Sector Lending were revised during June 2018 for Scheduled Commercial Banks (excluding Regional Rural Banks and Small Finance Banks). It has been decided to extend the same regulation to the Regional Rural Banks and Small Finance Banks. This is aimed to bring these banks at a level-playing field with other scheduled commercial banks. A circular in this regard shall be issued by the end of April 2019.

2). Apr 16, 2019: - Issue of ₹50 Denomination Banknotes in Mahatma Gandhi (New) Series bearing the signature of Shri Shaktikanta Das, Governor

The Reserve Bank of India will today issue ₹ 50 denomination Banknotes in Mahatma Gandhi (New) Series bearing the signature of Shri Shaktikanta Das, Governor. The design of these notes is similar in all respects to ₹ 50 banknotes in Mahatma Gandhi (New) Series. All banknotes in the denomination of ₹ 50 issued by the Reserve Bank in the past will continue to be legal tender.

3). Apr 23, 2019:- Issue of ₹ 200 Denomination Banknotes in Mahatma Gandhi (New) Series bearing the signature of Shri Shaktikanta Das, Governor

The Reserve Bank of India will shortly issue ₹ 200 denomination Banknotes in Mahatma Gandhi (New) Series bearing the signature of Shri Shaktikanta Das, Governor. The design of these notes is similar in all respects to ₹ 200 banknotes in Mahatma Gandhi (New) Series. All banknotes in the denomination of ₹ 200 issued by the Reserve Bank in the past will continue to be legal tender.

4). Apr 23, 2019: - Issue of ₹ 500 Denomination Banknotes in Mahatma Gandhi (New) Series bearing the signature of Shri Shaktikanta Das, Governor

The Reserve Bank of India will shortly issue ₹ 500 denomination Banknotes in Mahatma Gandhi (New) Series bearing the signature of Shri Shaktikanta Das, Governor. The design of these notes is similar in all respects to ₹ 500 banknotes in Mahatma Gandhi (New) Series. All banknotes in the denomination of ₹ 500 issued by the Reserve Bank in the past will continue to be legal tender.

5). Apr 26, 2019: - RBI Introduces ₹ 20 banknote in Mahatma Gandhi (New) Series

The Reserve Bank of India will shortly issue ₹ 20 denomination banknotes in the Mahatma Gandhi (New) Series, bearing signature of Shri Shaktikanta Das, Governor, Reserve Bank of India. The new denomination has motif of Ellora Caves on the reverse, depicting the country's cultural heritage. The base colour of the note is Greenish Yellow. The note has other designs, geometric patterns aligning with the overall colour scheme, both at the obverse and reverse.

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2017-19 RNI NO. KARBIL-2004/18001/Pages 20

All the banknotes in the denomination of ₹ 20 issued by the Reserve Bank in the earlier series will continue to be legal tender.

The image and salient features of ₹ 20 denomination banknote in the Mahatma Gandhi (New) Series are as under:

i. Image

Obverse (Front)

Reverse (Back)



ii. Salient Features

Obverse (Front)

1. See through register with denominational numeral 20
2. Denominational numeral in Devanagari
3. Portrait of Mahatma Gandhi at the centre
4. Micro letters 'RBI', 'INDIA' and '20'
5. Windowed demetalised security thread with inscriptions and RBI
6. Guarantee Clause, Governor's signature with Promise Clause and RBI emblem towards right of Mahatma Gandhi portrait
7. Ashoka Pillar emblem on the right
8. Mahatma Gandhi portrait and electrotype (20) watermarks
9. Number panel with numerals growing from small to big on the top left side and bottom right side.

Reverse (Back)

10. Year of printing of the note on the left
11. Swachh Bharat logo with slogan
12. Language panel
13. Motif of Ellora Caves
14. Denominational numeral in Devanagari.

Dimension of the banknote will be 63 mm x 129 mm

II.

Directions, Withdrawals, Penalties & Cancellation of Licences of Urban Co-operative Banks & Banks.

1). Apr 09, 2019: - RBI has issued certain Directions to The Mudhol Co-operative Bank Ltd., Post Mudhol, Bagalkot District, Karnataka.,

2). Apr 10, 2019: - RBI has imposed a monetary penalty of ₹ 1,00,000/- (Rupees one lakh only) on U.P. Postal Primary Co-operative Bank Ltd., Lucknow

3). Apr 15, 2019: - RBI is satisfied that in the interest of public, it is necessary to issue certain directions to The Bhimavaram Co-operative Urban Bank Ltd., Bhimavaram, Andhra Pradesh.

4). Apr 16, 2019: - Extension of period-The City Co- operative Bank Ltd., Mumbai

5). Apr 30, 2019: - The Needs of Life Co-op. Bank Ltd., Mumbai, Maharashtra

Source: www.rbi.org.in

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 11ನೇ ಮೇನ್, 1ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ–585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010